# 51

# ಭಾವಿಶಿಷ್ಯರು

## ಲೂಕ 9:57-62; ನೋಡಿ ಮತ್ತಾಯ 8:19-22,

## ಒಂದು ನಿಕಟ ನೋಟ

ಹಣ ಮರುಪಾವತಿಯ ಅಖಿತ ಖಚಿತತೆಯ ಅಡಿಯಲ್ಲಿ ಒಂದು ದೊಡ್ಡ ವ್ಯವಹಾರದಲ್ಲಿ ಸಂಭವಿಸಿದ ಕೆಟ್ಟ ಅನುಭವವನ್ನು ನೀವು ಎಂದಾದರೂ ಹೊಂದಿದ್ದೀರಾ? ನೀವು ಮರುಪಾವತಿಮಾಡಲು ಕೇಳಿದಾಗ ನಂತರದಲ್ಲಿ, ಈ ಉತ್ಪಾದನೆಯು ತಾನು ಹೇಳಿದಂತೆ ನಡೆದುಕೊಳ್ಳದೆ ಹೋದಾಗ, "ಓಹ್ ಇಲ್ಲ" "ನೀವು ಅನುಭವಿಸಿದ ಸಮಸ್ಯೆಯು ಈ ಖಚಿತತೆಯಲ್ಲಿ ಬರುವುದಿಲ್ಲ. *ಎಂದು ಮುದ್ರಿತ್ರವಾದುದನ್ನು ಓದಿರಿ.*"[1] ಎಂದು ನೀವು ಹೇಳಬಹುದು. ಮನುಷ್ಯರು ಉತ್ತಮವಾದ ಮುದ್ರಣವನ್ನು ಬಳಸುತ್ತಾರೆ ಆದರೆ ಕ್ರಿಸ್ತನು ಹಾಗೆ ಮಾಡಲಾರನು. ಜನರನ್ನು ಆತನು ಶಿಷ್ಯರಾಗುವುದಕ್ಕೆ ಕರೆದಾಗ ಯಾವದು ನಿಖರವಾಗಿ ಅವಶ್ಯವಿದೆ ಮತ್ತು ನಿಖರವಾಗಿ ಯಾವದು ಎದುರುನೋಡುವುದಾಗಿದೆ ಎಂದು ಅವರಿಗೆ ಹೇಳಿದನು.

ಈಗ ಇಲ್ಲಿ ಇದು ನಮ್ಮ ಪ್ರಸ್ತುತ ವೇದಭಾಗಕ್ಕಿಂತ ಹೆಚ್ಚು ಸಹಜವಾಗಿ ಇರುವುದಾಗಿದೆ. ಯೇಸು ಯೆರೂಸಲೇಮಿನತ್ತದ ತನ್ನ ಮಾರ್ಗದಲ್ಲಿದ್ದಾನೆ (ಲೂಕ 9:51). ಹಿಂಸೆ ಮತ್ತು ಕಷ್ಟಗಳು ಹಾಗೂ ಅಂತಿಮವಾಗಿ ಆತನ ಮರಣ ಆತನಿಗಾಗಿ ಕಾಯುತ್ತಿದ್ದವು (ಲೂಕ 9:44). ಆತನು "ದಾರಿಯಲ್ಲಿ ಹೋಗುತ್ತಿ" ರುವಂತೆಯೇ (ಲೂಕ 9:57), ಆತನು ಮೂವರು ಭಾವಿ ಶಿಷ್ಯರನ್ನು ಭೇಟಿಯಾದನು. ಆತನು ಬಯಸಿದ ಒಪ್ಪಿಸಿಕೊಳ್ಳುವಿಕೆಗಾಗಿ ಎಲ್ಲಾ ಸಂಶಯಗಳನ್ನು ಬಿಡಬೇಕು ಎನ್ನುವದೇ ಅವರಿಗೆ ಆತನ ಸವಾಲು ಆಗಿತ್ತು.

ಈ ಮನುಷ್ಯರಿಗೆ ಕ್ರಿಸ್ತನು ಏನು ಹೇಳಿದನೆಂಬುದನ್ನು ನೀವು ಓದಿದಾಗ, ಆತನು ಮಾತುಗಳು ಕಠಿಣವಾದವು ಎನ್ನಿಸುತ್ತವೆ. ಅನೇಕ ಅಂಶಗಳು ಮನದಲ್ಲಿ ಇರಬಹುದು. (1) ನಮ್ಮಲ್ಲಿ ಅನೇಕರು ಆ ದಿನದ ಸಂಪ್ರದಾಯಗಳಿಗೆ ಅಪರಿಚಿತರಾಗಿದ್ದೇವೆ. ಮಾಡಲಾದ ಭಿನ್ನಹಗಳ ಮತ್ತು ಯೇಸುವಿನ ಪ್ರತಿಕ್ರಿಯೆಯ ಮೇಲೆ ವಿಭಿನ್ನವಾದ ಓರೆಕೋರೆಗಳನ್ನು ಆ ಆಚರಣೆಗಳ ತಿಳುವಳಿಕೆಯು ಇಡುವುದಾಗಿದೆ. (2) ಕರ್ತನು ಮನಸ್ಸು ಮತ್ತು ಹೃದಯಗಳನ್ನು ಓದಬಲ್ಲವನಾಗಿದ್ದಾನೆ (ಮತ್ತಾಯ 9:4; 12:25; ಲೂಕ 5:20, 22; 6:8; ಯೋಹಾನ 1:47; 2:25; 21:17ಸಿ). ವ್ಯಕ್ತಿಯ ಭಿನ್ನಹವು ಯೋಗ್ಯವಾಗಿ ಕಂಡರೂ ಸಹಿತ ಆವ್ಯಕ್ತಿಗೆ *ನಿಜವಾಗಿ* ಏನು ಬೇಕು ಎಂಬುದು ಯೇಸು ತನ್ನ ಮನದಲ್ಲಿ ಬಲ್ಲವನಾಗಿದ್ದಾನೆ. (3) ಕ್ರಿಸ್ತನು *ಯುದ್ಧಕ್ಕೆ* ಹೊರಟಿದ್ದಾನೆ. ಪುಕ್ಕಲು ಸ್ವಭಾವ ಜನರಿಗಾಗಿ ಆತನಲ್ಲಿ ಸಮಯವು ಇಲ್ಲ. ತನಗೋಸ್ಕರ ಮೊದಲ ಆದ್ಯತೆಯನ್ನು ಆತನು ಬಯಸಿರಲಿಲ್ಲವಾದ್ದರಿಂದ ಯೇಸು ಜನರಿಗೆ ಏನನ್ನೂ ಕೇಳಲಿಲ್ಲ. ನಮ್ಮ ಅಧ್ಯಯನದಲ್ಲಿ ನನ್ನ ಗುರಿಯು ಬೇಡಿಕೆಯನ್ನು ಯಾವುದೇ ರೀತಿಯಲ್ಲಿ ಮೃದುಗೊಳಿಸದೆ ಕಠಿಣತೆಯ ಅಂತ್ಯದವರೆಗೂ ತೆಗೆದುಕೊಂಡು ಹೋಗುವುದು ಆಗಿದೆ. ಆ ದಿನದಲ್ಲಿ ಮತ್ತು ಈಗಲೂ. ಯೇಸು ಸಂಪೂರ್ಣ ಸಮರ್ಪಣೆಗಾಗಿ ಕರೆಕೊಡುತ್ತಿದ್ದಾನೆ.

ನಮ್ಮ ಮೂಲ ವೇದಭಾಗವು ಲೂಕ 9:57-62 ಆಗಿವೆ. ಮತ್ತಾಯ 8:19-22 ಇದೇ ತರದ ಘಟನೆಯನ್ನು ದಾಖಲಿಸಿದೆ. ಏನೇ ಆಗಲಿ ಎರಡೂ ಸಂದರ್ಭಗಳು ಒಂದೇ ಆಗಿರಬಹುದು, ನಾವು ತಿಳಿಯೆವು,[2] ಆದರೆ ಪರಿಚ್ಛೆದಗಳು ಎರಡು ಕಥೆಗಳು ಜೊತೆಯಾಗಿ ಯೋಗ್ಯವಾಗಿ ಅಭ್ಯಾಸಿಸಲಿಕ್ಕೆ ಸಾಕಷ್ಟಾಗಿದೆ.

## ಭಾವಿ ಶಿಷ್ಯರು ಆಗ

### ಭಾವನಾತ್ಮಕ ಅಭ್ಯರ್ಥಿ (ಲೂಕ 9:57, 58; ನೋಡಿ ಮತ್ತಾಯ 8:19, 20)

ಮೊದಲ ಭಾವಿ ಶಿಷ್ಯರು "ನೀನು ಎಲ್ಲಿಗೆ ಹೋದರೂ ನಾವು ನಿನ್ನ ಹಿಂದೆ ಬರುತ್ತೇವೆ" (ಲೂಕ 9:57ಬಿ) ಎಂದು ಯೇಸುವಿಗೆ ಹೇಳಿದರು. ಯೇಸು ಶಿಷ್ಯತ್ವಕ್ಕೆ ಕರೆಕೊಟ್ಟದ್ದು ನನ್ನನ್ನು "ಹಿಂಬಾಲಿಸು" ಎಂಬುದು ಆಗಿದೆ (ನೋಡಿರಿ ಲೂಕ 9:59; ಮತ್ತಾಯ 4:19; 9:9; 10:38; 16:24; 19:21). "ನಾವು ನಿನ್ನ ಹಿಂದೆ ಬರುತ್ತೇವೆ" ಎಂದು ಈ ಮನುಷ್ಯನು ಆ ಕರೆಗೆ ಸ್ಪಂದಿಸಿದನು. ಮುಂದೆ, ಆತನು ಎಷ್ಟರವರೆಗೆ ಹೋಗಬಲ್ಲನೂ ಎಂಬುದಕ್ಕೆ ಯಾವುದೇ ಇತಿಮಿತಿಯನ್ನು ಆತನು ಹಾಕಲಿಲ್ಲ: "ನೀನು ಎಲ್ಲಿಗೆ ಹೋದರೆ ನಾವು ನಿನ್ನ ಹಿಂದೆ ಬರುತ್ತೇವೆ."[3] ಇಂಥ ಸಮರ್ಪಣೆಗೆ ತಪ್ಪುವುದು ದೋಷಯುಕ್ತವಾಗಿದೆ. ಮತ್ತಾಯ 8 ಅದೇ ಘಟನೆಯನ್ನು ಹೇಳಿದ್ದಾದರೆ, ಆ ಮನುಷ್ಯನು ಶಾಸ್ತ್ರಿಯಾಗಿರುತ್ತಿದ್ದನು (ವಚನ 19). ಹೆಚ್ಚಾದ ಶಾಸ್ತ್ರಿಗಳು ಕ್ರಿಸ್ತನ ವೈರಿಗಳು ಆಗಿದ್ದರು (ಮತ್ತಾಯ 9:3; 12:38; 15:1, 2; 16:21). ವೈರಿಯ ಪಾಳಯದಿಂದ ಆತನ ಭಾರವನ್ನು ತೆಗೆದುಹಾಕುವುದರ ಜೊತೆ ಶಿಷ್ಯತ್ವವನ್ನು ಕೊಡುವ ಯಾರನ್ನಾದರೂ ಹೊಂದುವದು ಎಂಥ ಅಲ್ಹಾದಕರವಲ್ಲವೆ.

ಹೇಗೋ, ಯೇಸು ಆ ಮನುಷ್ಯನ ಹೃದಯವನ್ನು ನೋಡಿದಾಗ, ಆತನು ತಾನು ಏನನ್ನು ಮಾತನಾಡುತ್ತಿದ್ದಾನೆ ಎಂಬುದರ ಮಹತ್ವವನ್ನು ಅರಿತಿರಲಿಲ್ಲ ಎಂಬುದನ್ನು ನೋಡಿದನು. ಆತನು ಆ ಗುಂಪನ್ನು, ಅದ್ಭುತಕಾರ್ಯಗಳನ್ನು, ಮತ್ತು ಅಲ್ಲಿನ ಉತ್ಸಾಹವನ್ನು ನೋಡಿದರೆ, ಆತನು ಸ್ವನಿರಾಕರಿಸುವವನು, ತ್ಯಾಗಿಯೂ, ಮತ್ತು ತಾಳಿಕೊಳ್ಳುವವನೂ ಆಗಿರಬೇಕೆಂದು ಕ್ರಿಸ್ತನು ನೋಡುತ್ತಿದ್ದನು. ಸಮವಸ್ತ್ರಕ್ಕಾಗಿ, ಪರಡೆಗಾಗಿ ಮತ್ತು ಪದಕಕ್ಕಾಗಿ ಸೇನೆಯನ್ನು ಸೇರುವ ಮನುಷ್ಯನಂತೆ ಈತನಿದ್ದನು ಶಿಸ್ತು, ಅಪಾಯ, ಅಥವಾ ಮರಣ ಇವುಗಳಿಗೆ ಅಲ್ಪ ಯೋಚಿಸುವಿಕೆಗಾಗಿ ಅಲ್ಲ.

ಕರ್ತನು ಆತನ ಈ ಪ್ರಸ್ತಾಪವನ್ನು ಒಪ್ಪಿದನೂ ಅಥವಾ ತಿರಸ್ಕರಿಸಿದನೋ. ಬದಲಾಗಿ ಒಂದು ವೇಳೆ ಆತನನ್ನು ಹಿಂಬಾಲಿಸುವುದಾದರೆ ತಾನು ಬಯಸುವುದೇನು ಎಂಬ ಸಂಗತಿಗಳನ್ನು ಸೂಚಿಸಿದನು: "ನರಿಗಳಿಗೆ[4] ಗುದ್ದಗಳಿವೆ, ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳಿವೆ;[5] ಆದರೆ ಮನುಷ್ಯಕುಮಾರನಿಗೆ[6] ತಲೆಯಿಡುವಷ್ಟು ಸ್ಥಳವೂ ಇಲ್ಲ"[7] (ಲೂಕ 9:58; ನೋಡಿರಿ ಮತ್ತಾಯ 8:20). ಕಾಡು ಪ್ರಾಣಿಗಳು ಮತ್ತು ಹಕ್ಕಿಗಳು ದಿನದ ಅಂತ್ಯದಲ್ಲಿ ಮರಳಲು ಮನೆಗಳನ್ನು ಹೊಂದಿವೆ,[8] ಆದರೆ ಕ್ರಿಸ್ತನಿಗೆ ಯಾವದೂ ನಿಗದಿತವಾದ ಮನೆಯು ಇಲ್ಲ. ಅಲ್ಲಿನ ಛತ್ರದಲ್ಲಿ ಯವುದೇ ಕೋಣೆಯು ಆತನಿಗಾಗಿ ಇರಲಿಲ್ಲ (ಲೂಕ 2:7), ಗೆರೆಸೇನೆಯ ಭೂಮಿಯಲ್ಲಿ ಆತನಿಗಾಗಿ ಯಾವುದೇ ಕೋಣೆಯು ಇರಲಿಲ್ಲ (ಮಾರ್ಕ 5:1-17), ಮತ್ತು ನಜರೇತಿನಲ್ಲಿ ಆತನಿಗಾಗಿ ಯಾವ ಕೋಣೆಯೂ ಇರಲಿಲ್ಲ (ಲೂಕ 4:16-31). ಹೀಗೆ ಹೇಳುತ್ತಾರೆ. "ಯೇಸುವಿನ ಜೀವಿತವು ಎರವಲು ತೆಗೆದುಕೊಂಡಿದ್ದರಲ್ಲಿ ಆರಂಭವಾಗಿ ಮತ್ತು ಎರವಲು ಸಮಾಧಿಯಲ್ಲಿ ಕೊನೆಯಾಯಿತು."[9] "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮಗೆ ಗೊತ್ತಾಗಿದೆಯಲ್ಲಾ; ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವದರಿಂದ ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು" ಎಂದು ಪೌಲನು ಬರೆಯುತ್ತಾನೆ (2 ಕೊರಿಂಥ 8:9).[10]

ಯೇಸು ಇಲ್ಲಿ ದೂರುತ್ತಿಲ್ಲ ಅಥಾ ಕರುಣೆಗಾಗಿ ಕೇಳುತ್ತಿಲ್ಲ; ಆತನು ತನ್ನ ಜೀವಿತ ವನ್ನು ತಾನೇ ಸ್ವಪ್ರೇರಣೆಯಿಂದ ಆರಿಸಿಕೊಂಡಿದ್ದನು.[11] ಆ ಭಾವಿ ಶಿಷ್ಯನನ್ನು ಆತನು ನಿರಾಶೆ ಗೊಳಿಸಲು ಪ್ರಯತ್ನಿಸುತ್ತಿಲ್ಲ, ಆದರೆ ಶಿಷ್ಯನಾಗಿರುವುದಕ್ಕಾಗಿ ಎಂಬುದಕ್ಕಿರುವ ನಿರ್ಭಂದಗಳೇನು ಎಂದು ಆ ಮನುಷ್ಯನು ಅರಿತುಕೊಳ್ಳಬೇಕೆಂದು ಆತನು ಬಯಸಿದ್ದನು. ಈ

ತ್ವರೆಪಡುವ ಶಿಷ್ಯನಿಗೆ ಕರ್ತನ ಸಂದೇಶವು *“ಬಲೆಯನ್ನು ಎಣಿಸು”* ಎಂಬುದೇ ಆಗಿತ್ತು.[12]

ಒಬ್ಬ ಯೌವನಸ್ಥ ವ್ಯಕ್ತಿಯು ವೈದ್ಯನಾಗಬಯಸದ್ದಾದರೆ, *“ಅದು ಯೋಗ್ಯ ಬಯಕೆ”* ಅದರೆ ಮೊದಲ ಅದರ ಬೆಲೆಯನ್ನು ಅರಿತುಕೊಳ್ಳುವುದನ್ನು ಖಚಿತಪಡಿಸಿಕೋ. ಒಂದು ಸಾರಿ ನೀನು ಅಭ್ಯಾಸಿಸಲಿಕ್ಕಿರುವ ವರ್ಷದಲ್ಲಿ ಮತ್ತು ಇಂಟರ್ನಶಿಪ್‌ನಲ್ಲಿ ಉಳಿಯುವುದಕ್ಕೆ ಅವಶ್ಯವಾದ ಸಮರ್ಪಣೆಯನ್ನು ಅರಿತುಕೊಂಡ, ಇನ್ನೂ ನೀನು ಅದೇ ಒಡಂಬಡಿಕೆಯಲ್ಲಿಯೇ ಉಳಿಯುದಾದರೆ, ಆಗ, ಮುಂದೆ ಸಾಗು. “ಬೆಲೆಯನ್ನು ಎಣಿಸು!” ನೀನು ಪದವಿಯನ್ನು ಪಡೆಯಬೇಕಾದರೆ, ಜಾಗತಿಕ ಮಟ್ಟದ ಒಳ್ಳೆ ಕ್ರಿಡಾಪಟು ಆಗಲಿ ಹಂಬಲಿಸಿದ್ದಾರೆ, ಮದುವೆ ಯಾಗುವುದಾದರೆ, ನೀನು ಮತ್ತು ನಿನ್ನ ಸಂಗಾತಿ ಮಗುವನ್ನು ಪಡೆಯಲು ಬಯಸಿದ್ದಾದರೆ ಇದೊಂದು ಒಳ್ಳೆಯ ಸಲಹೆಯಾಗಿದೆ. ಅನೇಕ ಸಾರಿ, ಬೆಲೆಯನ್ನು ಎಣಿಸುವುದು ಅವರನ್ನು ನಿರ್ಧರವನ್ನಾಗಿಸುವು ಎಂದು ಹೇಳಲಾರೆವು, ಆದರೆ ಅವರ ನಿರ್ಧಾರಗಳ ಮೇಲೆ ಹೊತ್ತೊಯ್ಯುವ ಸಂಕಲ್ಪವನ್ನು ಅವರಲ್ಲಿ ತುಂಬುವುದರ ಬದಲು ಉದಾಸೀನಮಾಡಿದ ಕಾಠಿಣ್ಯತೆಗಳು ಹುಟ್ಟುಬಹುದಾಗಿದೆ.

“ಒಕ್ಕಲಿಗನ ಸಾಮ್ಯದಲ್ಲಿ” (ಮತ್ತಾಯ 13:18), ಬಂಡೆನೆಲ (ತೆಳುವಾಗಿ ಹರಡಿದ) ಮಣ್ಣಿನ ವಿಧವೂ ಇದೆ. ಈ ಮಣ್ಣಿನಲ್ಲಿ, ಸಸ್ಯವು ಬೇಗನೇ ನೆಲದಿಂದ ಮೇಲಕ್ಕೆ ಬರುತ್ತದೆ; ಆದರೆ ಆಗಸದಲ್ಲಿ ಸೂರ್ಯನು ಪ್ರಖರನಾಗಿದ್ದಾಗ, ಅಷ್ಟೆ ಬೇಗನೇ ಮುದುಡಿಹೋಗುತ್ತದೆ (ಮತ್ತಾಯ 13:5, 6). ಇದು “ಒಬ್ಬನು ವಾಕ್ಯವನ್ನು ಕೇಳಿದ ಕೂಡಲೇ ಸಂತೋಷದಿಂದ ಅದನ್ನು ಸ್ವೀಕರಿಸುತ್ತಾನೆ; ತನಗೆ ಬೇರಿಲ್ಲದ ಕಾರಣ ಇವನು ಸ್ವಲ್ಪಕಾಲ ಮಾತ್ರವೇ ಇದ್ದು ಆ ವಾಕ್ಯದ ನಿಮಿತ್ತವಾಗಿ ಸಂಗಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡಬಿಡುತ್ತಾನೆ; ಇವೇ ಬೀಜ ಬಿದ್ದ ಬಂಡೆನೆಲವಾಗಿರುವನು” (ಮತ್ತಾಯ 13:20, 21) ಎಂಬುದನ್ನು ಪ್ರತಿನಿಧಿಸುವುದಾಗಿದೆ ಎಂದು ಯೇಸು ಹೇಳಿದನು ಇಂಥ ಅಂತ್ಯವನ್ನು ಹೊಂದಿದ ಭಾವಿ ಶಿಷ್ಯರು ಯೇಸುವಿಗೆ ಬೇಕಾಗಿಲ್ಲ.

## ನಿರ್ಣಯವನ್ನು ತೆಗೆದುಕೊಳ್ಳಲಿಕ್ಕಾಗದ ಅಭ್ಯರ್ಥಿ
## (ಲೂಕ 9:59, 60ಣಿ ಮತ್ತಾಯ 8:21, 22)

ಭಾವಿ ಶಿಷ್ಯರು ಮೊದಲು ಸ್ವಯಂಪೂರ್ವಕವಾಗಿ ಮುನ್ನುಗುವದು ಆಗಿದೆ, ಆದರೆ ಎರಡನೆಯದಾಗಿ ಪ್ರೋತ್ಸಾಹದ ಅವಶ್ಯಕತೆಯೂ ಅವರಿಗೆ ಇದೆ.[13] ಕ್ರಿಸ್ತನು ಇತರರಿಗೆ ಹೇಳಿದಂತೆ ಆತನಿಗೂ ಕೂಡಾ “ನನ್ನನ್ನು ಹಿಂಬಾಲಿಸು” ಎಂದು ಹೇಳಿದನು (ಲೂಕ 9:59ಎ; ನೋಡಿರಿ ಮತ್ತಾಯ 8:22ಎ).[14]

ಆ ಮನುಷ್ಯನು “ಸ್ವಾಮೀ ನಾನು ಮೊದಲು ಹೋಗಿ ನನ್ನ ತಂದೆಯ ಉತ್ತರ ಕ್ರಿಯೆಗಳನ್ನು ಮಾಡಿಬರುವಂತೆ ಅಪ್ಪಣೆಯಾಗಬೇಕು” ಎಂದು ಹೇಳಿದನು (ಲೂಕ 9:59; ನೋಡಿರಿ ಮತ್ತಾಯ 8:21). ಈ ಬಿನ್ನಹವು ಯೋಗ್ಯವೆಂದು ತೋರುತ್ತದೆ. ತನ್ನ ತಂದೆಯ ಉತ್ತರ ಕ್ರಿಯೆಗಳನ್ನು ನೆರವೇರಿಸುವದು ಮಗನ ಕರ್ತವ್ಯವಾಗಿದೆ. ಆ ದಿನಗಳಲ್ಲಿ ತಂದೆತಾಯಿಗಳ ಉತ್ತರಕ್ರಿಯೆಗೆ ಪ್ರಮುಖವಾದ ಧಾರ್ಮಿಕ ಕರ್ತವ್ಯಗಳನ್ನು ಒಳಗೊಂಡು ಇತರ ಎಲ್ಲಾ ಕಾರ್ಯಗಳಿಗಿಂತಲೂ ಹೆಚ್ಚಗಿ ಪ್ರಾಧಾನ್ಯತೆಯು ಇತ್ತು.[15] ತಮ್ಮ ತಂದೆಗಳನ್ನು ಸನ್ಮಾನಿಸಬೇಕೆಂದು ಯೇಸು ತಾನೇ ಬೋಧಿಸಿದನು (ಮತ್ತಾಯ 15:4-6; ಓಡಿರಿ ವಿಮೋಚನಕಾಂಡ 20:12; ಎಫೆಸ 6:1-3). ಖಚಿತವಾಗಿಯೂ, ತಂದೆಯ ಯೋಗ್ಯವಾದ ಉತ್ತರಕ್ರಿಯೆಯನ್ನು ಮಾಡುವದು ಎನ್ನುವದು “ಗೌರವಿಸುವದು” ಎಂಬುವುದನ್ನೂ ಕೂಡ ಒಳಗೊಂಡಿದೆ.

“ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರಕ್ರಿಯೆಗಳನ್ನು ಮಾಡಲಿ, ನೀನಂತೂ ಹೋಗಿ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸು” ಎಂಬ ಅದಕ್ಕೋಸ್ಕರ ಕ್ರಿಸ್ತನಿಂದ ಬಂದ

ಪ್ರತಿಕ್ರಿಯೆಯು ಅಘಾತಕಾರಿಯೂ ಆಗಿತ್ತು (ಲೂಕ 9:60; ನೋಡಿ ಮತ್ತಾಯ 8:22). ಯೇಸು "ಕ್ರಿಯೆ" ಎಂಬ ಪದವನ್ನು ಎರಡು ರೀತಿಯಲ್ಲಿ ಬಳಸಿದ್ದಾನೆ: "ಆತ್ಮೀಕ ಕ್ರಿಯೆಗಳಿಗೆ" ಅವಕಾಶಕೊಟ್ಟು *ದೈಹಿಕ ಕ್ರಿಯೆಗಳ* ಹೂಣುವಿಕೆಯು ಆಗಿದೆ.[16] ಒಂದು ರೀತಿಯಲ್ಲಿ ಕರ್ತನ ಮಾತುಗಳು ಕರ್ಕಶವಾಗಿ, ಕರುಣಾರಹಿತವಾಗಿ, ನಿಷ್ಟುರವಾಗಿ ಅನ್ನಿಸಬಹುದು. ಅವುಗಳ ಹಿಂದೆ ಇರುವ ಸಾಧ್ಯತೆಗಳು ಯಾವವು? ಈ ಅಂಶಗಳನ್ನು ಗಮನಿಸಿರಿ:

(1) ಸತ್ಯವೇದಿಯ ಸಮಯದಲ್ಲಿ ಉತ್ತರ ಕ್ರಿಯೆಯು ತಕ್ಷಣವಾಗಿ ಆಗುವ ಹಾಗಿದ್ದಾಗ್ಯೂ (ಸಾಧ್ಯವಾದಷ್ಟು ಅದೇ ದಿ),[17] ಅನಂತರದ ಆಚರಣೆಗಳು ಒಂದು ವಾರ ಅದಕ್ಕಿಂತ ಹೆಚ್ಚು ದಿನಗಳನ್ನು ತೆಗೆದುಕೊಳ್ಳಲ್ಪಡುತ್ತಿತ್ತು. ಏನೇ ಆಗಲಿ ಇದರತ್ತ ನೋಡುವಾಗ, ಈ ಮನುಷ್ಯನು ಕರ್ತನ ಕರೆಯಿಂದಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ತಡಮಾಡುತ್ತಿದ್ದಾನೆ.

(2) ಕ್ರಿಸ್ತನು ತನ್ನ ಮಾರ್ಗವಾದ ಯೆರೂಸಲೇಮಿನ ಹಾದುಹೋಗುತ್ತಿದ್ದನು.[18] ಆ ಮನುಷ್ಯನಿಗೆ ಆತನನ್ನು ಹಿಂಬಾಲಿಸಲು ನಿಜವಾಗಿಯೂ ಮನಸ್ಸಿದದ್ದೇ ಆದರೆ, ಆತನು ಆಗಲೇ ಹೋಗಿರುತ್ತಿದ್ದನು, ಹೊರತಾಗಿ ಈಗಲ್ಲ.[19]

(3) ಆ ಮನುಷ್ಯನು ತನ್ನ ನಿರ್ಧಾರವನ್ನು ಆ ನಿರ್ಧಿಷ್ಟವಾಗಿ ಮುಂದೆ ಹಾಕುವ ಸಾಧ್ಯತೆಯು ಇದ್ದು ಅದು ದಿನದ ಆಚರಣೆ ಎಂದು ಪರಿಗಣಿಸಲ್ಪಡುತ್ತಿತ್ತು. ಆತನ ತಂದೆಯು ಈಗಲೇ ಮರಣಹೊಂದಿದ್ದು ಮತ್ತು ತುರ್ತಾಗಿ ಆತನ ಉತ್ತರಕ್ರಿಯೆಯ ಕಾರ್ಯಗಳಿಗೆ ಆತನು ಪಾಲ್ಗೊಳ್ಳುವ ಅವಶ್ಯಕತೆಯನ್ನು ಆತನ ಭಿನ್ನಹವು ಅರ್ಥಕೊಡುತ್ತಿರಲಿಲ್ಲ. ಆತನ ಮಾತುಗಳು "ನಾನು ಈಗ ಕುಟುಂಬದ ಕೆಲ ಜವಾಬ್ದಾರಿಗಳನ್ನು ಹೊಂದಿದ್ದೇನೆ. ಕೆಲ ಸಮಯದ ನಂತರ, ನನ್ನ ತಂದೆಯ ಕ್ರಿಯೆಗಳು ಮತ್ತು ನಮ್ಮ ಜವಾಬ್ದಾರಿಗಳು ಪರಿಪೂರ್ಣವಾದ ನಂತರದ ಸಮಯದಲ್ಲಿ ಆಗ ನಾನು ನಿನ್ನನ್ನು ಹಿಂಬಾಲಿಸುವೆನು" ಎಂಬರ್ಥ ಕೊಡುವಂತಿತ್ತು.[20] ಈ ಸಂಸ್ಕೃತಿಯಲ್ಲಿ ಇರುವಂಥವರು "ಮೊದಲು ನನ್ನ ತಂದೆಯ ಉತ್ತರ ಕ್ರಿಯೆಗಳನ್ನು ಮಾಡಲು ಅಪ್ಪಣೆಕೊಡು" ಎಂಬ ಮಾತುಗಳಿಗೆ ಅನೇಕ ಉದಾಹರಣೆಗಳನ್ನು ಕೊಡಬಹುದಾಗಿದ್ದು ದೂರದಲ್ಲಿನ ಭವಿಷ್ಯವನ್ನು ಸೂಚಿಸುವುದಾಗಿದ್ದು, ಮಾತನಾಡುವವರು ಅಲ್ಲಿನ ಪ್ರಸ್ತಾಪವನ್ನು ಪರಿಗಣಿಸಬೇಕು.[21] ಈ ರೀತಿಯ ಸಂಗತಿಯು ಇಲ್ಲಿದೆ ಎಂದು ವ್ಯಾಖ್ಯಾನಕಾರರು ನಂಬುವವರಾಗಿದ್ದಾರೆ. ಒಬ್ಬ ವ್ಯಕ್ತಿಯ ತಂದೆಯು ಮರಣಿಸಿದ್ದು ಮತ್ತ ಇನ್ನೂ ಹೂಣದೆ ಇದ್ದದ್ದಾರೆ, ಆ ಮನುಷ್ಯನು ಯೇಸು ಆತನನ್ನು ನೋಡಿ "ನನ್ನನ್ನು ಹಿಂಬಾಲಿಸು" ಎಂದು ಹೇಳುವಾಗ ಆ ರಸ್ತೆಯ ಬದಿಯಲ್ಲಿ ನಿಂತಿರುತ್ತಿರಲಿಲ್ಲ. ಬದಲಾಗಿ ಈ ಮನುಷ್ಯನು ತನ್ನ ಜವಾಬ್ದಾರಿಗಳನ್ನು ತೆಗೆದುಕೊಳ್ಳುವಲ್ಲಿಯೇ ನಿರತಾಗಿದ್ದನು ಎಂದು ಸೂಚಿಸುವವರಾಗಿದ್ದಾರೆ.[22]

(4) ಯೇಸು ಮಾನವರ ಹೃದಯಗಳನ್ನು ನೋಡುವವನಾಗಿದ್ದಾನೆ ಎಂಬುದನ್ನು ನೆನಪಿಡಿರಿ. ಹೇಗೋ, ಕ್ರಿಸ್ತನು ತನ್ನನ್ನು ಹಿಂಬಾಲಿಸದೇ ಇರುವುದಕ್ಕಾಗಿ ಅವುಗಳನ್ನು ನ್ಯಾಯವಾದ ಕಾರಣಗಳು ಎಂದು ಎಣಿಸಲಿಲ್ಲ ಎಂದು ಆ ಮನುಷ್ಯನ ತರ್ಕಬದ್ಧ ಮಾತುಗಳು ಧ್ವನಿಸುವಂತವು ಆಗಿವೆ ಆದರೆ, ಅದರ ನೆವ ಅಲ್ಲ.

ಆ ಮನುಷ್ಯನ ನೆವಗಳಲ್ಲಿನ ದುರಂತದ ಮಾತು ಎಂದರೆ "ಮೊದಲು" ಎಂಬುದಾಗಿದೆ. "ಸ್ವಾಮೀ, ನಾನು ಮೊದಲು ಹೋಗಿ ನನ್ನ ತಂದೆಯ ಉತ್ತರ ಕ್ರಿಯೆಗಳನ್ನು ಮಾಡಿಬರುವಂತೆ ಅಪ್ಪಣೆಯಾಗಬೇಕು." "ನನ್ನ ಮುಂದೆ ನಿಮಗೆ ಬೇರೆ ದೇವರುಗಳು ಇರಬಾರದು" ಎಂದು ದೇವರು ಹೇಳಿದ್ದಾನೆ (ವಿಮೋಚನಕಾಂಡ 20:3). "ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ಮೊದಲು ತವಕಪಡಿರಿ" ಎಂದು ಯೇಸು ಹೇಳಿದ್ದಾನೆ (ಮತ್ತಾಯ 6:33ಎ). ಆತನನ್ನು ಹಿಂಬಾಲಿಸುವದಕ್ಕಿಂತ ಹೆಚ್ಚಿನ ಆಧ್ಯತೆಯನ್ನು ಯಾವುದಕ್ಕೂ - ಕುಟುಂಬದ ಬಗ್ಗೆಯೂ ಕೂಡ ಇರಕೂಡದು ಎಂದು ಕ್ರಿಸ್ತನು ಒತ್ತಿ ಹೇಳಿದ್ದಾನೆ (ಲೂಕ 14:25-27). ಆತನು ಮಹತ್ವದ ನ್ಯಾಯಬದ್ಧವಾದ ಪಾರದರ್ಶಿಕೆಗಾಗಿ ಕರೆದಿದ್ದಾನೆ!

"ನಾನು ಮೊದಲು ಹೋಗಿ, ನನ್ನ ತಂದೆಯ ಉತ್ತರಕ್ರಿಯೆಗಳನ್ನು ಮಾಡಿಬರುವಂತೆ

ಅಪ್ಪಣೆಯಾಗಬೇಕು'' ಎಂಬಲ್ಲಿ ಆ ಮನುಷ್ಯನ ಹೃದಯದಲ್ಲಿ ಇರುವುದೇನು ಎಂದು ನಾನರಿಯೆನು, ಆದರೆ ಆತನ ರೀತಿಯನ್ನು ಅನೇಕ ಭವಿಷ್ಯರಲ್ಲಿ ಕಂಡಿದ್ದೇನೆ. "*ಮೊದಲು* ನನ್ನ ಕಾಡು ಓಟ್ಸನ್ನು ಬಿತ್ತುತ್ತೇನೆ ನಂತರ ನಾನು ಯೇಸುವನ್ನು ಹಿಂಬಾಲಿಸುತ್ತೇನೆ'' ಎಂದು ಅನೇಕ ಯೌವನಸ್ಥರು ಹೇಳುವುದನ್ನು ಕೇಳಿದ್ದೇನೆ. ಮೊದಲು ನನ್ನ ವೃತ್ತಿಯನ್ನು ಸಂಸ್ಥಾಪಿಸಿಕೊಳ್ಳುವೆ ಮತ್ತು ಕುಟುಂಬವನ್ನು ಕಟ್ಟಿಕೊಳ್ಳುವೆ, ಹಾಗೂ ನಂತರದಲ್ಲಿ ಯೇಸುವನ್ನು ಹಿಂಬಾಲಿಸುವುದರ ಬಗ್ಗೆ ಗಂಭೀರವಾಗಿ ಯೋಚಿಸುವೆ ಎಂದು ಯೌವನಸ್ಥ ಉದ್ಯೋಗಿಗಳು ಹೇಳುವುದನ್ನು ಕೇಳಿದ್ದೇನೆ. "ನಾನು ನನ್ನ ಕೆಲಸದಿಂದ ಹೊರಬಂದ *ತಕ್ಷಣವೇ* ನಾನು ಕ್ರಿಸ್ತನನ್ನು ಹಿಂಬಾಲಿಸುವೆ'' ಎಂದು ವಯಸ್ಸಾದರು ಹೇಳುವುದನ್ನು ಕೇಳಿದ್ದೇನೆ. ಕೆಲಸಾರಿ ಪ್ರಸ್ತಾಪಿಸಲಾದ ಗುರಿಗಳು ಯೋಗ್ಯವಾಗಿರುವುದಿಲ್ಲ, ಆದರೆ ಪ್ರತಿಯೊಂದು ಸಂಗತಿಗಳಲ್ಲಿ, ಇರುವ ದುರಂತವು ಅವೆಲ್ಲವೂ ಕ್ರಿಸ್ತನಿಗಿಂತ ಮೊದಲು ಇಡಲ್ಪಟ್ಟಿವು ಆಗಿವೆ.[23]

ನಾನು ಕಲಿಸಿದ ಮತ್ತು ದೀಕ್ಷಾಸ್ನಾನ ಮಾಡಿಸಿದ ಶ್ರೇಷ್ಟಸಾಮರ್ಥ್ಯವನ್ನು ಹೊಂದಿದ ಕೌಶಲ್ಯವುಳ್ಳ ಒಬ್ಬ ಯೌವನಸ್ಥ ತಂದೆಯನ್ನು ನಾನು ನೆನಪಿಸಿಕೊಳ್ಳುತ್ತೇನೆ. ಮೊದಲು, ಆತನು ಕರ್ತನ ಕಾರ್ಯಗಳಲ್ಲಿ ಹುಮ್ಮನಸ್ಸಿನಿಂದ ತೊಡಗಿಸಿಕೊಂಡಿರುತ್ತಿದ್ದನು. ನಂತರ ಆತನು ತನ್ನ ಸ್ವಂತದ ಉದ್ಯೋಗವನ್ನು ತೆರೆದನು ಮತ್ತು ಹಗಲು ರಾತ್ರಿ ಕೆಲಸವನ್ನು ಆರಂಭಿಸಿದನು. ತನ್ನ ಕುಟುಂಬವನ್ನು ನಿರ್ಲಕ್ಷಿಸಿದನು; ಆರಾಧನಾ ಸೇವೆಗಳನ್ನು ಆತನು ಕ್ವಚಿತ್ತಾಗಿ ನೋಡತೊಡಗಿದನು. "ನಾನು ಮೊದಲು ನನ್ನ ಉದ್ಯೋಗವನ್ನು ಕಟ್ಟಬೇಕು. ನಂತರ ನಾನು ಸಮಯ ಮತ್ತು ಹಣವನ್ನು ದೇವರಿಗೆ ಸಮರ್ಪಣೆ ಮಾಡುವೆನು'' ಎನ್ನುವ ಮೂಲಕ ತನ್ನಷ್ಟಕ್ಕೆ ತಾನೇ ನೆವಗಳನ್ನು ಕೊಡುವವನಾದನು. ಆತನು ದೇವರಿಂದ ದೂರ ಮತ್ತು ದೂರ ಗೊತ್ತು ಗುರಿಯಿಲ್ಲದೆ ಸಾಗತೊಡಗಿದನು; ನನಗೆ ತಿಳಿದಂತೆ, ಆತನು ಎಂದಿಗೂ ಹಿಂತಿರುಗಲಿಲ್ಲ.

ಈ ನಿರ್ಧಾರಕ್ಕೆ ಬರದ ಅಭ್ಯರ್ಥಿಗೆ ಯೇಸುವಿನ ಸಂದೇಶವು *"ಸಂಘರ್ಷವನ್ನು ಪರಿಗಣಿಸುವವನಾಗಿರು"* ಎಂದಾಗಿದೆ. ಅದಕ್ಕಾಗಿ ಆತನು "ವಿವಾದದ ಕರ್ತವ್ಯಗಳ ಮಧ್ಯದಲ್ಲಿ ಆಯ್ಕೆಯನ್ನು ಮಾಡಲೇಬೇಕಾದಲ್ಲಿ, ನೀನು ನನ್ನ ಶಿಷ್ಯನಾಗಿರುವುದೇ ಆದರೆ ಮೊದಲು ನೀನು ನಾನು ನಿನಗೇನು ಆಜ್ಞಾಪಿಸಿದೆನೋ ಅದನ್ನು ಮಾಡು'' ಎಂದು ಹೇಳುತ್ತಾನೆ. ಯೇಸು ಆತನಿಗೆ ಏನೆಂದು ಆಜ್ಞಾಪಿಸಿದ್ದನು? "ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರ ಕ್ರಿಯೆಯಗಳನ್ನು ಮಾಡಲಿ, *ನೀನಂತೂ ಹೋಗಿ* ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸು'' (ಲೂಕ 9:60; ಒತ್ತಿ ಹೇಳಿದ್ದು ನನ್ನದು). ಇನ್ನೊಂದು ಮಾತಿನಲ್ಲಿ, "ಅಲ್ಲಿ, ಅಂಥ ಉತ್ತರಕ್ರಿಯೆಗಳಲ್ಲಿ ಯಾವಾಗಲೂ ಜೀವಿತವಲ್ಲಿ ಸಾಧಾರಣ ಗುರಿಯನ್ನು ಹೊಂದಿದವರು ಉಪಸ್ಥಿತಲಿಸುತ್ತಾರೆ, ಆದರೆ ನನಗೆ ನಿನ್ನಲ್ಲಿ ವಿಶೇಷ ಗುರಿಯು ಉಂಟು; ದೇವರ ರಾಜ್ಯವನ್ನು ಪ್ರತಿಷ್ಠಾಪಿಸಲು ಪ್ರಸಿದ್ಧಿ ಪಡಿಸು ಎಲ್ಲಡೆ ಹೊರಟುಹೋಗು![24] ಈ ಅವಶ್ಯಕತೆಯು ತುರ್ತಾದುದು ಆಗಿದೆ, ಆದ್ದರಿಂದ *ಈಗಲೇ* ನನ್ನನ್ನು ಹಿಂಬಾಲಿಸು.''

### ಅನಿಶ್ಚಿತತೆಯ ಅಭ್ಯರ್ಥಿ (ಲೂಕ 9:61, 62)

ಮೂರನೆಯ ಭಾವಿ ಅಭ್ಯರ್ಥಿಯು ಮೂರನೆಯ ಭಾವಿ ಅಭ್ಯರ್ಥಿಯು, ಎರಡನೆವನಂತೆ ಇದ್ದು, ಮೊದಲು ಏನನ್ನಾದರೂ ಮಾಡಲು ಕೇಳಿದನು: "ಸ್ವಾಮೀ ನಾನು ನಿನ್ನನ್ನು ಹಿಂಬಾಲಿಸುತ್ತೇನೆ; ಆದರೆ ಮೊದಲು ನನ್ನ ಮನೆಯವರಿಗೆ ಹೇಳಿಬರುವುದಕ್ಕೆ ಅಪ್ಪಣೆಯಾಗಿ ಬೇಕು'' (ವಚನ 61) ಅಂದನು. ಹಿಂದಿನ ಭಿನ್ನಹದಂತೆಯೇ, ಆತನ ವಿಜ್ಞಾಪನೆಯು ಅಯೋಗ್ಯವಾದಂತೆ ಕಂಡುಬರುವುದಿಲ್ಲ.[25] ಹೇಗೋ, ಪೌರ್ಯಾತ್ಯ ದೇಶಗಳಲ್ಲಿ, ಬೀಳ್ಕೊಡುಗೆಯ ಸಮಾರಂಭವು ದಿನಗಳನ್ನು, ವಾರಗಳನ್ನು ತಿಂಗಳುಗಳನ್ನು ಕೂಡಾ ತೆಗೆದುಕೊಳ್ಳುವುದಾಗಿದೆ. ಆ ಮನುಷ್ಯನು ಯೇಸುವನ್ನು ಹಿಂಬಾಲಿಸುವುದಾದರೆ ಆತನು

ಅದನ್ನು ಆಗಲೇ ಮಾಡಬೇಕಿತ್ತು; ಕರ್ತನು ಮರುದಿನ. ವಾರಕ್ಕಿಂತ ಹೆಚ್ಚು ಅಥವಾ ಒಂದು ತಿಂಗಳ ನಂತರದವರೆಗೆ ಅಲ್ಲಿರುವವನಾಗಿರಲಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ.

ಒಂದು ವೇಳೆ ಈ ಮನುಷ್ಯನು ಹೇಳಿಬರುವುದಕ್ಕೆ ಮನೆಗೆ ಹೋಗಿದ್ದಾದರೆ, ಆತನ ಕುಟುಂಬವು ಕ್ರಿಸ್ತ ಶಿಷ್ಯನಾಗುವುದಕ್ಕೆ ಒಪ್ಪಿಸಿಕೊಳ್ಳುವದರ ಅನಿಶ್ಚಿತ ಜೀವನದ ಬಗೆಗೆ ಆತನೊಡನೆ ಮಾತನಾಡುವ ಸಾಧ್ಯತೆಯನ್ನೂ ಕೂಡಾ ಗಮನಿಸಿರಿ.[26] ಹಿಂದೂ ಧರ್ಮದಲ್ಲಿ ಉತ್ಕೃಷ್ಟರಾವರಿಗೆ ಬೋಧಿಸಿದಂಥ ಮಿಶನರಿಗಳು ಹೇಳುತ್ತಾರೆ. ಕೊನೆಯ ಪ್ರಯತ್ನದಲ್ಲಿ ಅವರು, "ಸರಿ, ನೀನು ದೀಕ್ಷಾಸ್ನಾನ ಹೊಂದುವುದಾರೆ, ಹಾಗೆಯೇ ಮಾಡು." ಆದರೆ ನಾವು ನನ್ನಿಂದ ಒಂದು ಸಂಗತಿಯನ್ನು ಬಯಸವವರಾಗಿದ್ದೇವೆ; ನೀನು ಅದನ್ನು ಮಾಡುವ ಮೊದಲು, ದಯಮಾಡಿ ಕೊನೆಯ ಭೇಟಿಗೋಸ್ಕರ ಮನೆಗೆ ಬಾ. "ನಾವು ನಿನಗೆ ಮಾಡಿದೆಲ್ಲವನ್ನು ನೆನಪಿಗೆ ತಂದುಕೋ. ನಿಶ್ಚಿತವಾಗಿ ಕೇಳುವುದಕ್ಕೆ ಇನ್ನು ಹುಚ್ಚೇನೂ ಇಲ್ಲ" ಎಂದು ಹೇಳುತ್ತಾರೆ. ಕೆಲ ಮಕ್ಕಳು ಈ ಹೃದಯವಿದ್ರಾವಕ ಬೇಡಿಕೆಯನ್ನು ವಿರೋಧಿಸುತ್ತಾರೆ ಮತ್ತು ಅವರೊಡನೆ ಮನೆಗೆ ಹೋದವರು ಕ್ರೈಸ್ತರಾಗಿ ಮರಳುವವರು ಕೇವಲ ಮಷ್ಟಿಯಷ್ಟು ಮಾತ್ರ ಎಂದು ಮಿಷನರಿಗಳು ಹೇಳುತ್ತಾರೆ.[27]

ಯೇಸು ಈ ವ್ಯಕ್ತಿಗೆ ಎರಡನೆಯನಿಗೆ ಪ್ರತಿಕ್ರಯಿಂದಂತೆಯೇ, ಕಾಹರಮಮಾಡದಿರಲು ಪ್ರಚೋದನೆ ಮಾಡಬಹುದಿತ್ತು. ಆ ಮನುಷ್ಯನ ಹೃದಯವನ್ನು ನೋಡಿದಾಗ, ಹೇಗೋ ಆತನು ತನ್ನ ಹಿಂದಿನ ಜೀವಿತಕ್ಕೆ ಬಲುವಾಗಿ ಅಂಟಿಕೊಂಡವನಾಗಿದ್ದನ್ನು ಅದರಿಂದ ಆತನು ಎಂದಿಗೂ ಮುಕ್ತನಾಗದೆ ಇರುವುದನ್ನುಆತನು ಕಂಡನು. ಈ ಅನಿಶ್ಚಿತವಾದ ಅಭ್ಯರ್ಥಿಗೆ ಆತನ ಸಂದೇಶವು *"ನಿರೀಕ್ಷಿತ ಪರಿಣಾಮ"* ಎಂಬುದೇ ಆಗಿದೆ. "ಯೇಸು ಅವನಿಗೆ ಯಾವನಾದರೂ ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲ" (ವಚನ 62) ಅಂದನು.

ನೇಗಿಲು ಮೂಲರೂಪದ ಬಗೆಗೆ ಮಾತನಾಡುವುದಾಗಿದ್ದು, ಬಲಗೈಯಿಂದ ಎತ್ತನ್ನು ಹಿಡಿದುಕೊಂಡು ಹಗುರಾದ ನೇಗಿಲನ್ನು ಎಡಗೈಯಿಂದ[28] ಹಿಡಿಯಬಹುದಾಗಿದೆ ನೀನು ಊಳುವುದನ್ನು ಮಾಡಿದ್ದೀಯೋ ಇಲ್ಲವೋ, ಯಾರೋಬ್ಬನೂ ನೇರವಾಗಿ ಊಳಲಾರನು ತನ್ನ ಭುಜಕ್ಕೆ ನೇರವಾಗಿ ಹಿಂದಕ್ಕೆ ಹರಳಿ ನೇಗಿಲನ ಸಾಲನ್ನು ನೋಡಿದಾಗ ಅದು ಎಂದಿಗೂ ನೇರ ವಾಗಿರದು ಎಂಬುದು ನಿನಗೆ ನಿಶ್ಚಿತವಾಗಿ ತೋರುತ್ತದೆ. ಒಂದು ನೋವುಯುಕ್ತವಾದ ದಿನವು ಮನದಲ್ಲಿ ಬರುತ್ತದೆ. ನಾನು ಇನ್ನೂ ಬಾಲಕನಾಗಿದ್ದಾಗ, ಹೊಲದಿಂದ ಒಂದು ನೇಗಿಲನ್ನು ಬಾಡಿಗೆಗೆ ತಂದಿದ್ದನು. ಏನು ಮಾಡುತ್ತಿದ್ದೇನೆಂದು ನನಗೆ ತಿಳಿದಿರಲಿಲ್ಲ. ಕಾಲುವೆಗಳು ಬಲು ವಕ್ರವಾಗಿ ಕೊನೆಯಾಗಿದ್ದು ಪೂರ್ತಿ ಹೊಲವು ತಿರುಗೊಂದವರ್ತಿ ಊಳಲ್ಪಟ್ಟಿತು!

ಹಿಂದಕ್ಕೆ ಹೊರಳಿದಾಗ ಊಳುವವನಿಗೆ ಮಾತ್ರ ಅದು ಭಯಂಕರವಾಗಿ ಕಾಣುವದು; ಕರ್ತನನ್ನು ಹಿಂಬಲಿಸುವವನಿಗೂ ಕೂಡಾ ಅದು ಭಯಂಕರವಾಗಿ ಕಾಣುವುದಾಗಿದೆ.[29] ಈ ಭಾವಿ ಶಿಷ್ಯನು ಸ್ಪಷ್ಟವಾಗಿ ತನ್ನ ಕುಟುಂಬದತ್ತ ಮತ್ತು ತನ್ನ ಸ್ನೇಹಿತರತ್ತ ತಿರುಗಿ ನೋಡುತ್ತಿದ್ದಾನೆ, ಆದರೆ ಹಿಂದಿನ ಎಲ್ಲವುಗಳನ್ನು - ಕ್ರಿಸ್ತೀಯ ತತ್ವಗಳನ್ನು ಅಲಕ್ಷಿಸುವ ಹಿಂದಿನ ಯಶಸ್ಸುಗಳನ್ನು ಒಳಗೊಂಡಿರುವುದನ್ನು ಆಕರ್ಷಿಸುವುದಾಗಿದೆ. ಕ್ರಿಸ್ತನ ಪ್ರಕಾರ, ಹಳೆಯ ಪಾಪದ ಜೀವಿತೆದೆಡೆ ನಿರಂತರವಾಗಿ ಹಿಂದಕ್ಕೆ ನೋಡುವ ಚಾಪಲ್ಯವುಳ್ಳವನು ದೇವರ ರಾಜ್ಯದೊಳಕ್ಕೆ ಸೇರುವುದಕ್ಕೆ ತನ್ನನ್ನು ತಾನು ಅನರ್ಹಗೊಳಿಸಿಕೊಳ್ಳುತ್ತಾನೆ.

## ಈಗಿನ ಭಾವಿ ಶಿಷ್ಯರು

ನಮ್ಮ ವೇದಭಾಗದಿಂದ ಯಾವ ಸಮಾರೋಪಕ್ಕೆ ತಲುಪಬಹುದು? ಅವರ ಹಿಂದಿನ ಜೀವಿತದೊಡನೆ, ಅವರ ಕುಟುಂಬ ಮತ್ತು ಸ್ನೇಹಿತರನ್ನು ಒಳಗೊಂಡದ್ದನ್ನು ತಳಕು ಹಾಕಿಕೊಂಡಿರುವುದರಿಂದ ಆರಂಭಿಸಿ ಕಠಿಣವಾದ ಎಲ್ಲಾ ಉಗ್ರವಾದ ಅವಶ್ಯವಾದ ನೀತಿಯನ್ನು

ಸೂಚಿಸುವುದಕ್ಕೆ ಈ ಗುಂಪು ಲೂಕ 9:57-62 ರ ಪರಿಚ್ಛೇದಗಳನ್ನು ಬಳಸುತ್ತಿತ್ತು. ಹೇಗೋ, ಕುಟುಂಬದ ಜವಾಬ್ದಾರಿಯನ್ನು ಸಂಪೂರ್ಣಗೊಳಿಸುವದು, ಸ್ನೇಹಿತರನ್ನು ಹೊಂದುವದು, ಅಥವಾ ಸಮಾಧಿ ಮಾಡುವುದಕ್ಕಾಗಿ ಹೋಗುವದು ತಪ್ಪು ಎಂದು ಯೇಸು ಎಂದಿಗೂ ಬೋಧಿಸಲಿಲ್ಲ. ಇದಕ್ಕೆ ಸರಿಯಾಗಿ ವ್ಯತರಿಕ್ತವಾಗಿ, ನಾವು ನಮ್ಮ ತಂದೆತಾಯಿಗಳನ್ನು ಕಾಳಜಿಮಾಡಲೇಬೇಕು ಎಂದು ಕಲಿಸಿದ್ದಾನೆ (ಮತ್ತಾಯ 15:4-6; 19:19), ಆತನೂ ಸ್ನೇಹಿತರನ್ನು ಹೊಂದಿದ್ದನು (ಲೂಕ 12:4; ಯೋಹಾನ 15:15), ಮತ್ತು ಆತನು ಸಮಾಧಿಯ ಕಾರ್ಯಗಳಲ್ಲಿ ಅಥವಾ ಎರಡರಲ್ಲೂ ಕಾಣಿಸಿಕೊಂಡಿದ್ದನು (ಮತ್ತಾಯ 9:23-25; ಲೂಕ 7:12-15).

ಲೂಕ 9:57-62ರಲ್ಲಿನ ಸಂದೇಶವಾದ ಒಪ್ಪಿಸಿಕೊಳ್ಳುವಿಕೆ ಪ್ರಸಂಗದಲ್ಲಿ ಅನೇಕ ಬಾರಿ ಉಪಯೋಗಿಸುವುದನ್ನು *ಸಾರಂಶಗೊಳಿಸುವುದು* ಆಗಿದೆ. ಕ್ರಿಸ್ತನ ಶಿಷ್ಯರಾಗಿರುವದು, ಆತನ ಕಾರ್ಯಗಳಿಗೆ ಸಂಪೂಣಣವಾಗಿ ಮತ್ತು ಪೂರ್ಣವಾಗಿ ನಾವು ಒಪ್ಪಿಸಿಕೊಡಲೇಬೇಕು.

**ಭಾವನಾತ್ಮಕ ಅಭ್ಯರ್ಥಿ**

"ನೀನು ಒಪ್ಪಿಸಿಕೊಳ್ಳುವುದಕ್ಕಿಂತ ಮುಂಚೆ ಯಾವ ಸಂಗತಿಗಳನ್ನು ಒಳಗೊಂಡಿರುತ್ತದೆ ಎಂದು ಯೋಚಿಸಿಕೊ" ಎಂದು ಕರ್ತನು ಹೇಳುತ್ತಾನೆ.[30]

ಈ ಹಿಂದೆ ಕ್ರಿಸ್ತನು "ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು *ನಿರಾಕರಿಸಿ ತನ್ನ ಶಿಲುಬೆಯನ್ನು* ದಿನಾಲು ಹೊತ್ತುಕೊಂಡು ನನ್ನ ಹಿಂದೆ ಬರಲಿ" ಎಂದು ಹೇಳಿದ್ದನು (ಲೂಕ 9:23; ನನ್ನ ವಿವರಣೆ). ಪ್ಯಾಲಿಸ್ತೀನಿನಲ್ಲಿ ವಾಸಿಸುತ್ತಿರುವ ಹೆಚ್ಚಾದವರು ಕೆಲವರು ತಮ್ಮ ಶಿಲುಬೆಯನ್ನು ಹೊತ್ತಿಕೊಂಡು ಹೋಗುತ್ತಿರುವದನ್ನು ನೋಡಿರಬಹುದು. ನೀನು ಕ್ರೂಜೆಯನ್ನು ಎತ್ತಿಕೊಂಡರೆ, ನೀನು ಮರಣಿಸಲಿದ್ದೀ ಎಂದರ್ಥ ಎಂದು ಪ್ರತಿಯೊಬ್ಬರೂ ತಿಳಿದಿದ್ದರು (ಯೋಹಾನ 19:17 ನೋಡಿರಿ); ಶಿಲುಬೆಯನ್ನು ಹಿಡಿದುಕೊಳ್ಳುವದು ಒಂದು ಕಡೆಯ ಮಾರ್ಗವಾಗಿದೆ. ಕರ್ತನು "ನನ್ನನ್ನು ಹಿಂಬಾಲಿಸು" ಎಂಬ ಸವಾಲನ್ನು ಕೊಟ್ಟಾಗ ಕಡೆಯದಾಗಿ ಆತನು ಸ್ವನಿರಾಕರಣೆಗೆ ಕರೆಕೊಟ್ಟಿದ್ದನು.

ನಮ್ಮ ವಿಧ್ಯಾರ್ಥಿಗಳಿಗೆ ಬೋಧಿಸುವ ಮತ್ತು ಕಲಿಸುವಂಥ ನಮ್ಮಲ್ಲಿ ಕೆಲವರು ಯೇಸುವನ್ನು ಹಿಂಬಾಲಿಸುವದು ಸರಳವಾದದ್ದು ಎಂಬ ಅನಿಸಿಕೆಯನ್ನು ಬಿಟ್ಟೀದ್ದಾದರೆ ಅದು ಅಪಕಾರ ಮಾಡುವುದಾಗಿದೆ. ಕ್ರಿಸ್ತನು ತನ್ನ ಶಿಷ್ಯರಿಗೆ "ಲೋಕದಲ್ಲಿ ನಿಮಗೆ ಸಂಕಟವುಂಟು" ಎಂದು ಹೇಳಿದನು (ಯೋಹಾನ 16:33ಬಿ; KJV). "ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವುದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗವರು" ಎಂದು ಪೌಲನು ಬರೆಯುತ್ತಾನೆ (2 ತಿಮೋಥೆ 3:12). ಒಂದು ಹಳೆಯ ಹಾಡು "ನೀನು ಶಿಲುಬೆಯನ್ನು ಹೊತ್ತುಕೊಳ್ಳದಿದ್ದರೆ, ನೀನು ಕಿರೀಟವನ್ನು ಧರಿಸಲಾರಿ" ಎಂದು ಘೋಶಿಸುವುದಾಗಿದೆ. ಒಂದು ಸರಳವಾದ ಸತ್ಯವೆಂದರೆ ನಂಬಿಗಸ್ತರಾಗಿ ಯೇಸುವನ್ನು ಹಿಂಬಾಲಿಸುವುದು ಎಂದರೆ ಒಂದನ್ನು ಬಿಟ್ಟುಬಿಡಬೇಕು ಎಂದಾಗಿದೆ.

ನಿಶ್ಚಿತವಾಗಿ! ಅದೇ ಸಮಯದಲ್ಲಿ, ನೀನು ಹಾಗೆ ಮಾಡುವ ಮೊದಲು, ಒಪ್ಪಿಸಿಕೊಳ್ಳುವಿಕೆಗೆ ಅವಶ್ಯವಾದದ್ದನ್ನು ಸಂಪೂರ್ಣವಾಗಿ ಅರಿತುಕೊಳ್ಳಬೇಕೆಂದು ಕರ್ತನು ಬಯಸುವವನಾಗಿದ್ದಾನೆ.

**ಚಂಚಲ ಮನದ ಅಭ್ಯರ್ಥಿ**

"ನೀನು ಒಪ್ಪಿಸಿಕೊಳ್ಳುವ ಮೊದಲು, ಅರ್ಥವೇನು?" ಅದರ ಮುಂದೆ ಯಾರಾದರೂ, ಕುಟುಂಬ ಅಥವಾ ಸ್ನೇಹಿತರೂ ಕೂಡಾ ಬರುತ್ತಾರೆ ಎಂದು ಅರಿತುಕೊಳ್ಳಬೇಕು ಎಂದು ಚಂಚಲದ ಮನದ ಅಭ್ಯರ್ಥಿಗೆ ಯೇಸು ಹೇಳುತ್ತಾನೆ. "ತಂದೆಯ ಮೇಲಾಗಲಿ ತಾಯಿಯ

ಮೇಲಾಗಲಿ ನನ್ನ ಮೇಲೆ ಮಮತೆ ಇಡುವುದಕ್ಕಿಂತ ಹೆಚ್ಚಾದ ಮಮತೆಯನ್ನು ಇಡುವವನು ನನಗೆ ಯೋಗ್ಯನಲ್ಲ'' (ಮತ್ತಾಯ 10:37) ಎಂದು ಯೇಸು ಹೇಳುತ್ತಾನೆ.

ನಮ್ಮ ಸಾಮನ್ಯ ಅವಶ್ಯಕತೆಗಳಲ್ಲಿ ಮನೆ, ಕುಟುಂಬ ಮತ್ತು ಸ್ನೇಹಿತರು ಇರುವವರಾಗಿದ್ದಾರೆ. ಯೇಸುವಿಗೆ ನಮ್ಮ ಜೀವಿತವನ್ನು ಒಪ್ಪಿಸುವ ಮೊದಲು "ಆದರೆ ಕರ್ತನನ್ನು ಹಿಂಬಾಲಿಸಲು ಇವರೆಲ್ಲರನ್ನೂ ಬಿಟ್ಟುಬಿಟ್ಟಿದ್ದಾದರೆ ಹೇಗೆ?'' ಅದನ್ನು ಮಾಡಲು ನಾನು ಸಿದ್ಧನಿದ್ದೇನೆಯೇ? ಎಂದು ಆತನು ನಮ್ಮಲ್ಲಿ ಪ್ರತಿಯೊಬ್ಬರನ್ನು ಕೇಳಬಹುದು. ಇಂಥ ಹೃದಯ ಶೋಧಿಸುವ ಪ್ರಶ್ನೆಗಳು ದ್ವಿಗುಣಗೊಳ್ಳಬಹುದು: "ಕ್ರಿಸ್ತನನ್ನು ಹಿಂಬಾಲಿಸುವುದರ ಅರ್ಥವು ನನ್ನ ಆದಾಯ ಕಡಿಮೆ ಎಂದರ್ಥವೆ ... ನಾನು ಮಾಡಿದ ಒಪ್ಪುಸಿಕೊಳ್ಳುವಿಕೆಯನ್ನು ಜನರು ಅರ್ಥಮಾಡಿಕೊಳ್ಳಬಹುದೆ ... ಅದು ಬಹುಶಃ ನಾನು ಹಿಂಸೆಗೊಳಗಾಗುವನೇ? ನಾನು ಆತನನ್ನು ಇನ್ನೂ ಹಿಂಬಾಲಿಸುವೆನೇ?'' Michael Wilcock ರವರು, "ನಾವು ಅನುಸರಿಸಬಹುದಾದ ಎರಡು ಮಾರ್ಗಗಳ ಮಧ್ಯದಲ್ಲಿ ಆರಿಸಿಕೊಳ್ಳುವಿಕೆಯು ಬಂದಾಗ ಇದು ಅವಶ್ಯವಾಗುತ್ತದೆ'' ಎಂದು ಬರೆಯುತ್ತಾರೆ. "ಮಾರ್ಗಗಳ ಮಧ್ಯದಲ್ಲಿ ಆರಿಸಿಕೊಳ್ಳುವಿಕೆಯು ಅವಶ್ಯವಾಗಿ ಬಂದಾಗ ನಾವು ಯಾವದನ್ನು ಆರಿಸಿಕೊಳ್ಳುತ್ತೇವೆ? ಸಮಾಧನವೇ ಸಂಪ್ರದಾಯವೇ, ಸಂಸ್ಕಾರವೇ ಅಥವಾ ಕ್ರಿಸ್ತನೇ?''[31]

ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; "... *ಎಲ್ಲಾದರಲ್ಲೂ ಪ್ರಮುಖನಾಗುವಂತೆ* ... ಎದ್ದು ಬಂದನು'' (ಕೊಲಸ್ಸೆ 1:18; ಒತ್ತಿ ಹೇಳಿದ್ದು ನನ್ನದು). KJVಯಲ್ಲಿ "ಎಲ್ಲಾ ಸಂಗತಿಗಳಲ್ಲಿ ಆತನು *ಪ್ರಮುಖ ಸ್ಥಾನವನ್ನು* ಹೊಂದಿದ್ದಾನೆ'' ಎಂದಿದೆ (ಒತ್ತಿ ಹೇಳಿದ್ದು ನನದು). ಕೆಲವಕ್ಕೋಸ್ಕರ, ವಾಸ್ತವ ಎಂದರೆ ಕರ್ತನು ಮೊದಲು ಬರಬೇಕಾದದ್ದು ನೆನಪು ಹುಟ್ಟಿಸಬೇಕಾದದ್ದು ಆಗಿದೆ; ಇತರರಿಗೋಸ್ಕರ, ಇದು ದಿವ್ಯದರ್ಶನವಾಗಿದೆ.

**ಅನಿಶ್ಚಿತವಾದ ಅಭ್ಯರ್ಥಿ**

ನನ್ನ ಬೆಲೆಯು ಯಾವುದನ್ನು ಅನುಸರಿಸುವುದಾಗಿದೆ ಮತ್ತು ಯಾವದು ಅವಶ್ಯವೆಂದು ಅರಿತುಕೋ ಎಂಬ ಯೇಸುವಿನ ಸಂದೇಶಗಳು ಮಹತ್ವದ್ದಾಗಿದೆ: "ಹೇಗೋ, ಆ ಎರಡು ಬುದ್ಧಿವಾದಗಳನ್ನು ಕೇಳಿದ ನಂತರ, ಕ್ರಿಸ್ತನನ್ನು ಹಿಂಬಾಲಿಸುವದು ಎಷ್ಟು ಕಠಿಣವಾಗಿದೆ ಎಂದರೆ, ನಾನು ನಿಜವಾಗಿಯೂ ಇದರಲ್ಲಿ ಆಸಕ್ತಿ ಇಲ್ಲ!'' ಎಂದು ಆ ಭಾವಿ ಶಿಷ್ಯರ ಹೇಳುವಿಕೆಯನ್ನು ನಾನು ಊಹಿಸಿಕೊಳ್ಳಬಲ್ಲೆ. "ನನ್ನನ್ನು ಹಿಂಬಾಲಿಸುವುದರಿಂದ ಹಿಂದಕ್ಕೆ ತಿರುಗಿಕೊಳ್ಳುವವನು ಪರಿಣಾಮವನ್ನು ಯೋಜಿಸುವವನು ಆಗಿದ್ದಾನೆ: ದೇವರ ರಾಜ್ಯದಲ್ಲಿ ನೀನು ಹೊಂದಿಕೆಯಾಗಲಾರಿ'' ಎಂಬ ಮಾತುಗಳು ಆದ್ದರಿಂದಲೇ ಸಮತೋಲನದ ಅವಶ್ಯಕತೆಯನ್ನು ಹೊಂದಿದೆ!

ಇದನ್ನು ಓದುವ ನಿಮ್ಮಲ್ಲಿ ಅನೇಕರು ಇದರಿಂದ ಎಚ್ಚರವುಳ್ಳವರಾಗಿರುತ್ತೀರಿ. ಇದಕ್ಕಿಂತ ಮುಂಚೆ, ತಾನು ಕಟ್ಟಲಿರುವ ಸಭೆಯನ್ನು ಯೇಸು ಮೆಸ್ಸೀಯನ ರಾಜ್ಯ ಎಂದು ಸೂಚಿಸಿದನು (ಮತ್ತಾಯ 16:18, 19; ನೋಡಿರಿ ಕೊಲಸ್ಸೆ 1:13). ಪರಲೋಕವು ಹಲವು ಬಾರಿ ದೇವರ ರಾಜ್ಯ ಎಂದು ಹೇಳಲ್ಪಟ್ಟಿದೆ ಎಂಬುದರ ಬಗೆಗೆ ತಿಳಿದಿರುತ್ತಿ (1 ಕೊರಿಂಥ 15:50; 2 ತಿಮೋಥೆ 4:18; 2 ಪೇತ್ರ 1:11). ಆದ್ದರಿಂದ "ದೇವರ ರಾಜ್ಯದಲ್ಲಿ ಹೊಂದಿಕೊಳ್ಳದು ...'' ಎಂಬುದನ್ನು ಓದುವಾಗ, "ಹೌದು, ಒಬ್ಬನು ಕರ್ತನನ್ನು ಹಿಂಬಾಲಿಸುವುದಕ್ಕೆ ಒಪ್ಪಿಕೊಳ್ಳದೆ ಹೋದದ್ದೇ ಆದರೆ ಆತನು ಸಭೆಯ ನಂಬಿಗಸ್ತ ಸದಸ್ಯನಾಗಲಾರನು ಮತ್ತು ಕೊನೆಯಲ್ಲಿ ಆತನು ಪರಲೋಕಕ್ಕೆ ಹೋಗುವುದಿಲ್ಲ'' ಎಂದು ನಾವು ಯೋಚಿಸುವವರಾಗಿರುತ್ತೇವೆ. ಪ್ರತಿಯೊಂದು ಭಾಗದ ಹೇಳಿಕೆಯು ನಿಜವಾದದ್ದಾಗಿದೆ, ಆದರೆ ಕ್ರಿಸ್ತನ ಮಾತುಗಳು ಮೊದಲ ಶತಮಾನದ ವೀಕ್ಷಕರಿಗೆ ಭಾವನಾತ್ಮಕ ಒತ್ತಡವನ್ನು ವರ್ಗಾಯಿಸಲಿಲ್ಲ.

ಯೇಸುವಿನ ಕೇಳುಗರಿಗೆ ಮೆಸ್ಸೀಯನ ರಾಜ್ಯ ಎಂಬುದರ ಅರ್ಥವನ್ನು ಮನದಲ್ಲಿ

ತಂದುಕೊಳ್ಳುವಾ. ಅವರು ಶತಮಾನಗಳಿಂದ ಕೂತೂಹಲದಿಂದ ಆ ರಾಜ್ಯವನ್ನು ಎದುರು ನೋಡುವವರಾಗಿದ್ದರು, ಪ್ರಾರ್ಥಿಸುವವರಾಗಿದ್ದರು (ನೋಡಿರಿ ಮಾರ್ಕ 11:10; 15:43). ಕರ್ತನು "ಪರಲೋಕ ರಾಜ್ಯವನ್ನು ಹಿಡಿದುಕೊಂಡು ಬೋಧಿಸಲು ಬಂದನು" (ಮತ್ತಾಯ 3:2; 4:17). ಆತನು ತನ್ನ ಹಿಂಬಾಲಕರಿಗೆ "... ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಭಲವಾಗಿ ಬಂದಿರುವುದನ್ನು ನೋಡುವ ತನಕ ಮರಣಹೊಂದುವುದಿಲ್ಲ ಎಂದು ಹೇಳಿದನು" (ಮಾರ್ಕ 9:1). ದೇವರ ರಾಜ್ಯ ಸ್ಥಾಪಿಸುವುದಕ್ಕೋಸ್ಕರ ಹತ್ತಿರದಲ್ಲಿ ಸೆಳೆಯುವ ಸಮಯದಂತೆ ಉತ್ಸಾಹವು ಕಟ್ಟಲ್ಪಡುತ್ತಾ ಇತ್ತು.[32] ದೇವರ ರಾಜ್ಯದಲ್ಲಿ ಸೇರದೆ ಇರುವುದಕ್ಕೆ ಸಾಧ್ಯತೆಯಿರುವ ದೊಡ್ಡ ಅನಾಹುತದೆಡೆ ಬರುವುದೇ ಆಗಿದೆ! ಹೇಗೋ, ಕ್ರಿಸ್ತನು "ನೇಗಿಲಿನ ಮೇಲೆ ಕೈ ಇಟ್ಟ" ಪ್ರತಿಯೊಬ್ಬರ ಹಳೆ ವರಸೆ ಏನೇ ಆಗಿರಲಿ ಅವರು ಹಿಂದಕ್ಕೆ ಹೊರಳಬಾರದು ಎಂದು ಘೋಶಿಸಿದನು.

ಹೊಸ ಒಡಂಬಡಿಕೆಯು ದೇವರ ರಾಜ್ಯವನ್ನು/ಸಭೆಯನ್ನು ಯಾವುದೇ ಬಲಿಗಿಂತ ಯೋಗ್ಯವಾದ ಅಮೂಲ್ಯವಾದ ನಿಧಿಯಾಗಿರುವುದಕ್ಕೆ ಹೋಲಿಸುವವರಾಗಿದ್ದಾರೆ (ಮತ್ತಾಯ 13:44-46). ದೇವರ ರಾಜ್ಯ/ಸಭೆಯ ಸಂಬಂಧಿಸಿದ ಸಂದೇಶವು "ಸುವಾರ್ತೆ" ಆಗಿದೆ (ಮತ್ತಾಯ 24:14; ಅಪೊಸ್ತಲರ ಕೃತ್ಯಗಳು 8:12). ದೇವರ ರಾಜ್ಯ/ಸಭೆಯಲ್ಲಿ, ನಾವು ಕ್ರಿಸ್ತನೊಡನೆ ಅನ್ಯೋನ್ಯತೆಯನ್ನು ಹೊಂದಿರುತ್ತೇವೆ (ಮತ್ತಾಯ 26:29). ದೇವರ ರಾಜ್ಯ/ಸಭೆಯಲ್ಲಿ ನೀತಿ, ಶಾಂತಿ ಮತ್ತು ಸಂತೋಷವನ್ನು ಹೊಂದಿರುತ್ತೇವೆ (ರೋಮಾಪುರ 14:17). ನಾವೂ ಸಹ, ಯೇಸುವಿನ ರಾಜ್ಯದಲ್ಲಿ ಅಯೋಗ್ಯರಾಗಿರುವದು ವಿನಾಶದ ವಿನಾಶವೆ ಆಗಿದೆ ಎಂದು ನಂಬುವವರಾಗಿದ್ದಾರೆ ಎಂದು ನಾನು ಆಶಿಸುತ್ತೇನೆ.

ಕರ್ತನನ್ನು ಹಿಂಬಾಲಿಸಲು ನಮ್ಮ ಹೃದಯವು ಆತನಲ್ಲಿ ನೆಲೆಯಾಗಿರಬೇಕು. "ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ *ಯೇಸುವಿನ ಮೇಲೆ ದೃಷ್ಟಿಯಿಟ್ಟು* ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ರದಿಂದ ಓಡೋಣ" (ಇಬ್ರಿಯ 12:1ಸಿ, 2ಎ; ಒತ್ತಿ ಹೇಳಿದ್ದು ನನ್ನದು). ಪೌಲನು "ಆದರೆ ಒಂದು ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವುಗಳನ್ನು ಹಿಡಿಯುವುದಕ್ಕೆ ಎದೆಬೊಗ್ಗಿದವನಾಗಿ ದೇವರು ಕ್ರಿಸ್ತನ ಮೂಲಕ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ" ಎಂದು ಬರೆಯುತ್ತಾನೆ (ಫಿಲಿಪ್ಪಿ 3:13ಬಿ, 14).[33] ಇಬ್ಭಾಗದ ಹೃದಯವನ್ನು ಕರ್ತನು ಸ್ವೀಕರಿಸುವುದಿಲ್ಲ (ಹೋಶೆಯ 10:2; KJV; ಪ್ರಕಟನೆ 3:16).

## ಮುಕ್ತಾಯ

ಯೇಸುವಿನ ಸವಾಲಿಗೆ ಮೂರು ಭಾವಿ ಶಿಷ್ಯರು ಹೇಗೆ ಪ್ರತಿಕ್ರಯಿಸಿದರು? ಅವರು ಎಲ್ಲವನ್ನು ಮರೆತು ಆತನನ್ನು ಹಿಂಬಾಲಿಸಿದರೆ, ಅಥವಾ ಬಹು ಐಶ್ವರ್ಯವಂತನಾದ ಅಧಿಕಾರಿಯು ಮಾಡಿದ ಹಾಗೆ ಅವರೂ ಕೂಡಾ ದುಃಖತರಾಗಿ ಹೋದರೆ (ಮತ್ತಾಯ 19:22)? ನಮಗೆ ಹೇಳಲ್ಪಟ್ಟಿಲ್ಲ. ನಿನಗೆ ಹೇಳಲ್ಪಟ್ಟಾಗ ನೀನು ಹೇಗೆ ಪ್ರತಿಕ್ರಯಿಸುವಿ ... .

... ನೀನು ಕ್ರಿಸ್ತನನ್ನು ಹಿಂಬಾಲಿಸಿದಾಗ ಕೇವಲ ಕಷ್ಟವು ಎದುರಾದಾಗುವದಾದರೆ?
... ನಿನ್ನ ತಂದೆಯನ್ನು ಯಾರಾದರೂ ಸಮಾಧಿ ಮಾಡಿದ್ದಾದರೆ?
... ನಿನ್ನ ಕುಟುಂಬಕ್ಕೆ ವಿದಾಯವನ್ನು ಹೇಳದೆ ಹೋಗಿದ್ದಾದರೆ?
... ನೀನು ಹಿಂತಿರುಗಿ ನೋಡಿದಾಗ, ಕರ್ತನ ರಾಜ್ಯದಲ್ಲಿ ಹೊಂದಿಕೆಯಾಗದೆ ಇದ್ದಿದ್ದಾದರೆ?

ಬಲು ಮಹತ್ವದ್ದೆಂದರೆ, *ಈ ದಿನ* ಆತನ ಆಮಂತ್ರಣಕ್ಕೆ ಹೇಗೆ ಪ್ರತಿಕ್ರಯಿಸುವಿ? ಆತನು ಇನ್ನೂ "ನನ್ನನ್ನು ಹಿಂಬಾಲಿಸು" ಎಂದು ಹೇಳುತ್ತಿದ್ದಾನೆ. ಆದರೆ ಅವಶ್ಯಕತೆಯು

ಕೆಳದರ್ಜೆಯದು ಆಗಿರುವುದಿಲ್ಲ: "ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲು ಹೊತ್ತುಕೊಂಡು ನನ್ನ ಹಿಂದೆ ಬರಲಿ" ಎಂದು ಹೇಳಿದ್ದನು (ಲೂಕ 9:23). ನಿನ್ನ ಜೀವಿತವನ್ನು ನಿನ್ನದೆಲ್ಲವನ್ನೂ ನೀನು ಒಪ್ಪಿಸಿಕೊಂಡಿದ್ದಾದರೆ. ದಯವಿಟ್ಟು *ಈ ದಿನವೇ* ಮಾಡು.[34]

## ಮಾಹಿತಿ

ಈ ಪ್ರಸಂಗಕ್ಕಿರಬಹುದಾದ ಇನ್ನೊಂದು ಶೀರ್ಷಿಕೆಯು "ಉತ್ತಮ ಮುದ್ರಣವಿಲ್ಲದ್ದು" ಎಂದಾಗಿರಬಹುದು. ಸಾಧ್ಯತೆಯಿರುವ ಇತರ ಶಿರ್ಷಿಕೆಗಳು "ಶಿಷ್ಯತ್ವದ ಬೆಲೆ" ಮತ್ತು "ಶಿಷ್ಯತ್ವಕ್ಕೆ ಬೇಡಿಕೆ" ಎಂಬವುಗಳನ್ನು ಕೂಡಾ ಒಳಗೊಂಡಿದೆ.

---

ಟಿಪ್ಪಣಿಗಳು

[1]ನೀವು ಅಂಥಹ ಅನುಭವವನ್ನು ಹೊಂದಿದ್ದಾದರೆ, ಇದನ್ನು ನೀವು ವ್ಯಕ್ತಿಗತಮಾಡಿಕೊಳ್ಳ ಬಹುದು. ಯಾವುದೇ ರೀತಿಯಲ್ಲಿ, ನೀವು ಇರುವೆಡೆಯಲ್ಲಿ ಈ ದೃಷ್ಟಾಂತವನ್ನು ಹೊಂದಿಸಿಕೊಳ್ಳಿರಿ. [2]ಸುವಾರ್ತೆಯ ವಿವರಣೆಗಾಗಿ ಲೇಖಕರಿಗೆ ಮಹತ್ವದ್ದಲ್ಲವಾದರೂ ಮಹತ್ವದಲ್ಲವಾದ್ದರಿಂದ ಎರಡು ಘಟನೆಗಳು ಸಮವಾಗಿವೆ. ಹೇಗೋ, ಹಿನ್ನಲೆಯು ಒಂದೇ ರೀತಿಯಾಗಿಲ್ಲ, ಹೀಗೆ ಅವುಗಳು ವಿಭಿನ್ನ ಸಮಯದವು ಎಂದು ಕಾಣುತ್ತವೆ. ಒಂದಕ್ಕಿಂತ ಹೆಚ್ಚು ಸಂದರ್ಭದಲ್ಲಿ ಯೇಸು ಭಾವಿ ಶಿಷ್ಯರನ್ನು ಭೇಟಿಯಾಗಿದ್ದು ಮತ್ತು ಒಂದೇ ತರದ ಹೇಳಿಕೆಯನ್ನು ಮಾಡಿದ್ದು, ಮತ್ತು ಪ್ರತಿಸಾರಿಯೂ ಅದೇ ರೀತಿಯಲ್ಲಿ ಪ್ರತಿಕ್ರಯಿಸಿದ್ದು ಊಹಿಸಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. [3]ಈ ಪರಿಚ್ಛೇದವನ್ನು ಯೋಹಾನ 13:37 ಮತ್ತು ಲೂಕ 22:33ರಲ್ಲಿನ ಪೇತ್ರನ ಭಾವನಾತ್ಮಕವಾದ ಮತ್ತು ಅರ್ಹವಲ್ಲದ ಹೇಳಿಕೆಗಳ ಜೊತೆ ಹೋಲಿಸಿರಿ. [4]ನರಿಗಳು ಹಕ್ಕಿಗಳು ಯೇಸು ಪ್ರಯಾಣಿಸುತ್ತಿದ್ದ ಮತ್ತು ಬೋಧಿಸುತ್ತದ್ದ ಸ್ಥಳಗಳಲ್ಲಿ ಹೆಚ್ಚಾಗಿ ಇರುವವು ಆಗಿದ್ದವು (ನ್ಯಾಯಾಸ್ಥಾಪಕ 15:4; ನೆಹಮೀಯ 4:3; ಕೀರ್ತನೆ 63:10; ಪರಮಗೀತ 2:15; ಪ್ರಲಾಪ 5:18; ಎಹಜ್ಕೇಲ 13:4; ಮತ್ತಾಯ 6:26; 13:4, 32; ಲೂಕ 13:32). [5]"ಗೂಡು" ಎಂಬ ಗ್ರೀಕ್‌ಪದದ ಭಾಷಾಂತರದ ಅಕ್ಷರಹ ಅರ್ಥವು "ಬಿಡಾರ" ಎಂದಾಗಿದೆ. ಇದು ಕೇವಲ ಗೂಡುಗಳನ್ನು ಒಳಗೊಂಡಿಲ್ಲ, ಆದರೆ ಹಕ್ಕಿಗಳು ವಿಶ್ರಮಿಸಿಕೊಳ್ಳುವ ಸ್ಥಳವನ್ನು ಒಳಗೊಂಡಿವೆ. [6]ಈ ಸಂದರ್ಭದಲ್ಲಿ, "ಮನುಷ್ಯಕುಮಾರನು" ಎಂಬುದು ಯೇಸುವನ್ನೇ ಸೂಚಿಸುವುದಾಗಿದೆ. [7]"ತಲೆಯಿಡುವುದಕ್ಕೂ ಸ್ಥಳವಿಲ್ಲ" ಎಂಬುದು "ಮನೆಯು ಇಲ್ಲ" ಎಂಬುದನ್ನು ಹೇಳುವ ಗಾದೆಯ ಮಾತಾಗಿದೆ. The Cotton Patch Version U.S.ದ ಒಂದು ವಿವರಣೆಯು ಇದೇ ರೀತಿಯಾಗಿದ್ದು "ಆತನ ಹ್ಯಾಟನ್ನು ನೇತು ಹಾಕಲೂ ಸ್ಥಳವಿಲ್ಲ" ಎಂಬುದು ಇದೇ ಅರ್ಥಕೊಡುವುದಾಗಿದೆ. [8]ಸಮಯದಿಂದ ಸಮಯಕ್ಕೆ ರಾತ್ರಿಯಲ್ಲಿ ಯೇಸು ಮಲಗಬೇಕಾದಂಥ ಮನೆಗಳಲ್ಲಿ ಕಪೆರ್ನೌಮಿನ ಪೇತ್ರನ ಮನೆ ಮತ್ತು ಬೇಥಾನ್ಯದಲ್ಲಿನ ಮರಿಯಳು ಮತ್ತು ಮಾರ್ಥರ ಮನೆಗಳೂ ಒಂದಾಗಿದ್ದವು. ಆದರೆ ಆತನಿಗೆ ಯಾವುದೇ ನಿರ್ದಿಷ್ಟ ಮನೆಯು ಇರಲಿಲ್ಲ. ಹೆಚ್ಚಿನ ಸಮಯ, ಆತನು ಮತ್ತು ಆತನ ಶಿಷ್ಯರು ಸ್ಥಳದಿಂದ ಸ್ಥಳಕ್ಕೆ ಅಲೆದಾಡುತ್ತಿದ್ದರು. [9]Quoted in William Barclay, *The Gospel of Matthew,* rev. ed., vol. 1 (Philadelphia: Westminster Press, 1975), 311. [10]"ಹಣ ಮತ್ತು ಸಂಪತ್ತಿ" ನೊಡನೆ ದೂರದರ್ಶನ ಸುವಾರ್ತಿಕರು ತಮ್ಮ ಸೇವೆಯಲ್ಲಿ ದೊಡ್ಡ ಮನೆ, ಎಸ್ಟೇಟ್ ಮತ್ತು ದೋಣಿಗಳನ್ನು ದೇವರ ಸಮ್ಮತಿಯ ಆಧಾರವನ್ನಾಗಿ ಸೂಚಿಸುವವರಾಗಿದ್ದಾರೆ! ಭಾವಿ ಬೋಧಕರಿಗೆ ಮತ್ತು ಮಿಶನರಿಗಳಿಗೆ ಇಲ್ಲೊಂದು ಸಂದೇಶವಿದೆ: ಕೆಲಸವನ್ನು ಹಣ ಮತ್ತು ಸ್ಥಾನದಿಂದ ನಿಮ್ಮನ್ನು ಸನ್ಮಾನಿಸುವ ಉದ್ಯೋಗದಂತೆ ಭಾವಿಸದಿರಿ. ಬದಲಾಗಿ ನಿಮ್ಮನ್ನು ನೀವೆ ಸೇವೆಗೆ ಒಪ್ಪಿಸಿಕೊಳ್ಳಿರಿ ಮತ್ತು ಜೀವಿತದ ಅವಶ್ಯಕತೆಗಳನ್ನು (ಐಶಾರಮಿ ಅಲ್ಲ) ಕರ್ತನು ಒದಗಿಸುವನು ಎಂದು ಭರಸವಿಡಿರಿ (ಮತ್ತಾಯ 6:33).

[11]ಆತನು ತಾನೇ ಸ್ವಯಂ ಪರಲೋಕಕ್ಕೆ ಹೋದನು, ಮತ್ತು ನಜರೇತಿನಲ್ಲಿಯ ತನ್ನ ಮನೆಯನ್ನು ತಾನೇ ಸ್ವತ ಬಿಟ್ಟನು. [12]ಇನ್ನೊಂದು ಸಂದರ್ಭಕ್ಕೋಸ್ಕರ ಭಾವಿ ಶಿಷ್ಯರಿಗೆ "ಬೆಲೆಯನ್ನು ಎಣಿಸಲು" ಹೇಳಿದ್ದನ್ನು ಲೂಕ 14:27-30ರಲ್ಲಿ ನೋಡಿರಿ. [13]"ಯೇಸು ಮೊದಲು 'whoa' ಹೇಳಿದನು, ಆದರೆ ಎರಡನೆಯದಾಗಿ 'giddyup' ಹೇಳಿದನು"; "ಯೇಸು ಮೊದಲು ತಡೆಗಳನ್ನು ತೆಗೆದನು ಎರಡನೆಯ

ಹಂತದಲ್ಲಿ ಗಾಳಿಯನ್ನು ತೆಗೆದನು ಎಂದು ವಿವಿಧ ಉದಾಹರಣೆಗಳನ್ನು ಬಳಸಬಹುದಾಗಿದೆ." ನೀನು ಇರುವೆಡೆ ಅರ್ಥವಾಗುವಂತಹ ಉದಾಹರಣೆಗಳನ್ನು ನೀನು ಬಳಸು. ಮೊದಲನೆಯದು ಹಠದ ಸ್ವಭಾವ ಆದರೆ, ಎರಡನೆಯದು ಕಡಿಮೆ ಕೌತುಕವುಳ್ಳದ್ದಾಗಿರುತ್ತದೆ. [14]ಇದಾದ ಸ್ವಲ್ಪ ಹೊತ್ತಿನಲ್ಲಿ, ಯೇಸು ಯೂದಾಯದ ಪಯಣಕ್ಕೆ ಎಪ್ಪತ್ತು ಮಂದಿ ಶಿಷ್ಯರನ್ನು ಕಳುಹಿಸದನು (ಲೂ 10:1). ಬಹುಶಃ ಯೇಸು ಈ ಕಾರ್ಯಕ್ಕಗಿ ಜನರನ್ನು ನಯೋಜಿಸಿದ್ದಿರಬೇಕು (ನೋಡಿರಿ ಲೂಕ 10:2; ಹೋಲಿಸಿ ಲೂಕ 9:60ಬಿ ದೊಡನೆ ಲೂಕ 10:11ಬಿ ನ್ನು ಹೋಲಿಸಿರಿ). ಕ್ರಿಸ್ತನು "ನನ್ನನ್ನು ಹಿಂಬಾಲಿಸು" ಎಂದು ಹೇಳಿ ದಾಗ ಆತನ ಅವರನ್ನು ಪೂರ್ಣಪ್ರಮಾಣದ ಸೇವೆಗಾಗಿ ಅವರನ್ನು ಕರೆಯುತ್ತಿದ್ದಾನೆ. [15]ರಬ್ಬಿಗಳ ಪ್ರಕಾರ, ಪೋಷಕರ ಉತ್ತರಕ್ರಿಯೆಯು ಧಾರ್ಮಿಕ ಕಾರ್ಯದ ಅಥವಾ ಧರ್ಮಶಾಸ್ತ್ರ ಅಧ್ಯಯನದ ಮೇಲೆ ಪ್ರಾಧಾನ್ಯತೆಯನ್ನು ಪಡೆದಿತ್ತು. ಒಬ್ಬ ಮಗನು ತನ್ನ ತಂದೆಯ ಉತ್ತರ ಕ್ರಿಯೆಗಾಗಿ ಧಾರ್ಮಿಕವಾಗಿ, ಸಾಮಾಜಿಕವಾಗಿ ಮತ್ತು ಕೌಟುಂಬಿಕವಾಗಿ ಹಂಗಿನಲ್ಲಿರುವವನಾಗಿರುತ್ತಿದ್ದನು. ಮಾದರಿಗಾಗಿ ಪ್ರೀಯರ ಉತ್ತರ ಕ್ರಿಯೆಯ ಪ್ರಮುಖ್ಯತೆಯ ಮೇಲಿನ ಹಳೆಯ ಒಡಂಬಡಿಕೆಯ ಪರಿಚ್ಛೇದಗಳಿಗಾಗಿ ನೋಡಿರಿ ಆದಿಕಾಂಡ 23:9; 25:9; 35:29; 49:28-50:3; 50:5, 13, 14, 26; ಯೆಹೋಶುವ 24:29, 30. [16]ಎಫೆಸ 2:1; 1 ತಿಮೋಥೆ 5:6; 1 ಯೋಹಾನ 3:14 ನೋಡಿರಿ. [17]ಮತ್ತಾಯ 9:18, 23; ಯೋ ಹಾನ 11:1, 14, 17; ಅಪೊಸ್ತಲರ ಕೃತ್ಯಗಳು 5:5, 6, 10 ನೋಡಿರಿ. [18]ಮತ್ತಾಯ ವಿವರಣೆಯೂ ಕೂಡಾ ಯೇಸು ಕಾರ್ಯಪ್ರವೃತ್ತನಾಗಿದ್ದು ಗಲಿಲಾಯ ಸಮುದ್ರದ ಪೂರ್ವದಿಕ್ಕಿನತ್ತ ಸಾಗಿದ್ದನು ಎಂದು ಸಹ ತೋರಿಸುವುದಾಗಿದೆ (ಮತ್ತಾಯ 8:18, 23, 28). [19]ನಾವಿರುವಲ್ಲಿನ ಚಿರಪರಿಚಿತ ಪದ ಪ್ರಯೋ ಗವು "ಮನುಷ್ಯನು ಕಿಟಕಿಯಷ್ಟ ಚಿಕ್ಕ ಅವಕಾಶ ಹೊಂದಿದ್ದಾನೆ" ಎಂಬುದು ಆಗಿದೆ. [20]ಆ ಯೌವನಸ್ಥನ ಮಾತುಗಳು "ನನ್ನ ತೋಟವು ಒಂದು ಹಂತಕ್ಕೆ ಬರಲಿ ಮತ್ತು ನಾನು ನನ್ನ ಪಿತ್ರಾರ್ಜಿತವಾದ ಭಾಧ್ಯತೆಯನ್ನು ಹೊಂದಿಕೊಳ್ಳುವೆನು ನಂತರ ನಾನು ಯೇಸುವನ್ನು ಹಿಂಬಾಲಿಸುವೆನು ಎಂದಾಗಿದೆ. ಎಷ್ಟಾದರೂ ನನಗೆ ಆರ್ಥಿಕ ಭದ್ರತೆ ಬೇಕಾಗಿದ್ದುದರಿಂದ ಶಿಷ್ಯತನವು ನನಗೆ ಒಗ್ಗದು" ಎಂಬ ಅರ್ಥವನ್ನು ಸೂಚಿಸುವಂತಿತ್ತು.

[21]ಒಬ್ಬ ಮಿಶನರಿಯು ಟರ್ಕಿದೇಶದ ಯೌವನಸ್ಥನಿಗೆ ಒಂದು ಸಲಹೆಯನ್ನು ಕೊಟ್ಟನು. ಆ ಮನುಷ್ಯನು "ನಾನು ಮೊದಲು ನನ್ನ ತಂದೆಯ ಉತ್ತರ ಕ್ರಿಯೆ ಮಾಡಲೇಬೇಕು" ಎಂದು ಉತ್ತರಿಸಿದನು. ಮಿಶನರಿಯು ಕರುಣೆಯನ್ನು ತೋರಿದಾಗ, ಆ ಯೌವನಸ್ಥನು ತನ್ನ ತಂದೆಯು ಮರಣಿಸಿಲ್ಲ, ಬದಲಾಗಿ ಮಿಶನರಿ ಸಲಹೆಗಿಂತಲೂ ಮೊದಲು ಕುಟುಂಬದ ಕಟ್ಟುಪಾಡುಗಳನ್ನು ಪರಿಪೂರ್ಣ ಮಾಡಬೇಕು ಎಂಬರ್ಥದಲ್ಲಿ ಆತನು ಹೇಳಿದ್ದನು. ಶಿಷ್ಯವೇತನಕ್ಕಾಗಿ ಕರೆಯಿರುವ ಆರಬ ಯೌವನಸ್ಥನಿಗೆ ಒಬ್ಬ ಇಂಗ್ಲೀಷ್ ಅಧಿಕಾರಿಯು "ನಾನು ತೆಗೆದುಕೊಳ್ಳುವೆ" ಎಂದು ಹೇಳಿದನು, ಅದಕ್ಕಾತನು "ನನ್ನ ತಂದೆಯ ಉತ್ತರ ಕ್ರಿಯೆಯ ನಂತರ" ಎಂದು ಉತ್ತರಿಸಿದನು. ಆ ಸಮಯದಲ್ಲಿ ಆಯ ಯೌವನಸ್ಥನ ತಂದೆಯು ನಾಲ್ವತ್ತು ವರ್ಷದವನಿದ್ದು ಒಳ್ಳೆಯ ಆರೋಗ್ಯವನ್ನು ಹೊಂದಿದ್ದನು. ಒಬ್ಬ ಬೋಧಕರು ಇಂದು ಮಧ್ಯಪೂರ್ವದಲ್ಲಿ ಯಾರಾದರೂ ಇನ್ನೊಂದು ದೇಶಕ್ಕೆ ವಾಸಕ್ಕೆ ಹೋಗಲು ಇಚ್ಚಿಸಿದ್ದಾದರೆ, "ಮೊದಲು ನಿನ್ನ ತಂದೆಯ ಉತ್ತರ ಕ್ರಿಯೆಗಳನ್ನು ಮಾಡಿದ್ದೀಯಾ" ಆತನಿಗೆ ಕೇಳಲಾಗುತ್ತಿತ್ತು ಎಂದು ಹೇಳಿದರು. ಇದರ ಅರ್ಥವು "ನೀನು ನಿನ್ನ ಕುಟುಂಬದ ಕಟ್ಟುಪಾಡುಗಳನ್ನು ಮುಗಿಸುವ ತನಕ ಅಲ್ಲಿ ವಾಸಮಾಡಲು ಹೋಗಲು ಸಾಧ್ಯವಿಲ್ಲ" ಎಂದಾಗಿದೆ. [22]ಉತ್ತರ ಕ್ರಿಯೆಯು ಮರಣದ ಅದೇ ದಿನದಿಂದ ಪ್ರಾರಂಭವಾಗುತ್ತಿತ್ತು ಎಂಬುದನ್ನು ನೆನಪಿನಲ್ಲಿಡಿರಿ. [23]ಈ ಭಾಗವು ಬಹುವಾಗಿ ವಿಸ್ತರಿಸಲ್ಪಟ್ಟಿದೆ. ಆಸ್ಟ್ರೇಲಿಯಾದಲ್ಲಿ ನಾನು ಕೆಲ ಮಿಶನರಿಗಳ ಜೊತೆ ಕಾರ್ಯಮಾಡುತ್ತಿದ್ದಾಗ "ನಾವು ಆಸ್ಟ್ರೇಲಿಯಾಕ್ಕೆ ಬಂದು ನಿಮಗೆ ಸಹಾಯಮಾಡಬೇಕೆನ್ನುತ್ತೇವೆ ಆದರೆ ಮೊದಲು ನಾವು ಮಾಡಲೇಬೇಕಾದ ..." ಎಂದು ಹಲವು ಬಾರಿ ನಮಗೆ ಹೇಳಪಟ್ಟವುಗಳು ಇವೆ. ಅದನ್ನು ನಾವು ಕೇ ಳಿದಾಗ, ಈ ಬೋಧಕರು ಎಂದಿಗೂ ಬರಲಾರರು ನಾವು ಬಲ್ಲವರಾಗಿದ್ದೆವು. ಆಸ್ಟ್ರೇಲಿಯಾದಲ್ಲಿ ಒಂದು ಶಾಲಾ ಬೋಧನೆಯನ್ನು ನಾವು ಹೊಂದಿದೆವು ಮತ್ತು ನಿರೀಕ್ಷಿತ ವಿದ್ಯಾರ್ಥಿಗಳು, "ನಾವು ಶಾಲೆಗೆ ಬರುತ್ತೇವೆ, ಆದರೆ ಮೊದಲು ನಾವು ಮಾಡಲೇಬೇಕಾದ ..." ಎಂದು ಹಲವು ಬಾರಿ ನಮಗೆ ಹೇಳಿದ್ದಿದೆ. ಅದನ್ನು ನಾವು ಕೇಳಿದಾಗ, ಆ ಯೌವನಸ್ಥನು ಎಂದಿಗೂ ಬರಲಾರನು ಎಂದು ನಾವು ಬಲ್ಲವರಾಗಿದ್ದೆವು. ನೀವು ಇರುವೆಡೆಯಲ್ಲಿ ಗೋಸ್ಕರವಾಗಿ ಈ ನೆವಗಳಿಗಾಗಿ ಅನ್ವಯವನ್ನು ಮಾಡಿರಿ [24]ಈ ಪಾಠದಲ್ಲಿ ಸಿಕ್ಕುವ ಅಡಿನುಡಿ 14ನ್ನು ನೋಡಿರಿ. [25]ಎಲಿಯನು ಕರೆದಾಗ ಎಲೀಷನು ಇದೇ ತರದ ಬಿನ್ನಹವನ್ನು ಮಾಡಿದನು, ಮತ್ತು ಪ್ರವಾದಿಯು ಆತನ ಬಿನ್ನಹವನ್ನು ಮಾನ್ಯಮಾಡಿದನು (1 ಅರಸು 19:19-21). [26]ಬಲುಸಾಮಾನ್ಯ ಕಾರಣವೆಂದರೆ ಆಭಾವಿ ಮಿಶನರಿಗಳು ಆಸ್ಟ್ರೇಲಿಯಾಕ್ಕೆ ಬರಲಿಲ್ಲ ಎಂಬುದು ಅವರ ಪೋಷಕರು ಇದನ್ನು ಹೊರತುಪಡಿಸಿ "ದಯಮಾಡಿ ನನ್ನ ಮೊಮ್ಮಕ್ಕಳನ್ನು, ನಾನೆಂದಿಗೂ ಅವರನ್ನು ನೋಡಲು ಆಗದಂತಹ ಆಸ್ಟ್ರೇಲಿಯಾಕ್ಕೆ ಕರೆದೊಯ್ಯಬೇಡ" ಎಂದು ಹೇಳುವುದೇ ಆಗಿದೆ! [27]See

Stephen F. Olford, *Committed to Christ and His Church* (Grand Rapids, Mich.: Baker Book House, 1991), 37–38. [28]ಲೂಕ 9:62ರಲ್ಲಿ "ಕೈ" ಎಂಬ ಏಕವಚನ ಪ್ರಯೋಗವಾದದ್ದನ್ನು ನೋಡಿರಿ. [29]ಹಿಂದೆ ನೋಡುವದು ಲೋಟದ ಹೆಂಡತಿಗೆ ವಿನಾಶಕವಾಯಿತು (ಆದಿಕಾಂಡ 19:26). [30]ಅನ್ವಯದ ಭಾಗದಲ್ಲಿ, ನಾನು ಯೇಸುವಿನ ಸಂದೇಶವನ್ನು ಎಲ್ಲಾ ತರದ ಅಭ್ಯಾರ್ಥಿಗಳಿಗಾಗಿ ಸಾರಾಂಶೀಕರಿಸಿದ್ದೇನೆ. ಇವುಗಳು ಅದೇ ತರದ ವ್ಯಾಖ್ಯಾನಗಳು ಆಗಿವೆ. ಪ್ರತಿಯೊಂದು ಸಂಗತಿಯಲ್ಲಿ "ಪರಿಣಾಮವನ್ನು" ಕಾಣಲು ಪದಗಳನ್ನು ನೀನು ಬಳಸಬಹುದು.

[31]Michael Wilcock, *The Message of Luke: The Saviour of the World,* The Bible Speaks Today Series (Downers Grove, Ill.: Inter-Varsity Press, 1979), 119. [32]ಸಭೆ/ದೇವರ ರಾಜ್ಯ ಕ್ರಿಸ್ತನ ಮರಣ ಹೂಣುವಿಕೆ ಮತ್ತು ಪುನರುತ್ಥಾನದ ನಂತರದ ಮೊದಲ ಪಂಚಾಶತ್ತಮದಂದು ಸ್ಥಾಪಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು). [33]"ಹಿಂದೆ ನೋಡುವುದರ" ನಿಷೇದದ ಅರ್ಥವು ನಾವು ಸಂಪೂರ್ಣವಾಗಿ (ಅಥವಾ ಮಾಡಬಹುದಾದ) ನಮ್ಮ ಹಿಂದಿನದೆಲ್ಲವನ್ನು ನಮ್ಮ ನೆನಪಿನಿಂದ ಅಳಿಸಿಹಾಕುವುದಾಗಿದೆ. ಪೌಲನು ಹಿಂದಿನದನ್ನು ನೆನಪಿಸಿಕೊಂಡನು (ಫಿಲಿಪ್ಪಿ 3:5, 6), ಆದರೆ ಆತನು ಅದರಲ್ಲಿ ಇರಲಿಲ್ಲ. ಆತನ ದೃಷ್ಟಿಯು ಕ್ರಿಸ್ತನ ಮೇಲೆ ಮತ್ತು ಭವಿಷ್ಯದ ಮೇಲೆ ಇರುವುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಲೂಕ 9:62ರಲ್ಲಿನ "ಹಿಂದಕ್ಕೆ ನೋಡದೆ" ಎಂಬುದು ಮೂಲಭಾಷೆಯಲ್ಲಿ ಸಹಜ ನೋಟವನ್ನು ಸೂಚಿಸುವುದಿಲ್ಲ. ಆದರೆ ಬದಲಾಗಿ ನಿರಂತರವಾದ ಕ್ರಿಯೆಯನ್ನು ಸೂಚಿಸುವುದಾಗಿ ಎಂದು ಗಮನಿಸಲ್ಪಟ್ಟಿದೆ. [34]ಯೇಸುವಿನ ಶಿಷ್ಯರಾಗುವದು ಹೇಗೆ ಎಂದು ನಿಮ್ಮ ಕೇಳುಗರಿಗೆ ನೀವು ಹೇಳಬಹುದು (ಯೋಹಾನ 3:16; ಲೂಕ 13:3; ಮತ್ತಾಯ 10:32, 33; ಮಾರ್ಕ 16:15, 16) ಮತ್ತು ತಮ್ಮ ಒಪ್ಪಿಸಿಕೊಡುವಿಕೆಯಲ್ಲಿ ಅವರು ನಿಜವಾಗಿಲ್ಲವಾದರೆ ಹೇಗೆ ಅವರು ಪುನಃ ತುಂಬಿಸಿಕೊಳ್ಳಬೇಕು (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9) ಎಂದು ನಿಮ್ಮ ಕೇಳುಗರಿಗೆ ನೀವು ಹೇಳಬಹುದು.